

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 13 ಸಂಚಿಕೆ : 3 ಪುಟ 8 ಸುತ್ತೂರು ಶ್ರೀಕ್ಷೇತ್ರ ಭಾನುವಾರ, 3 ಫೆಬ್ರವರಿ 2019




**ಇಂದು ಬೆಳಗ್ಗೆ 10.55ಕ್ಕೆ ರಥೋತ್ಸವ**

## ಸುತ್ತೂರು ಜಾತ್ರೆ ಜನೋಪಯೋಗಿ

ರಾಜ್ಯಮಟ್ಟದ ಭಜನಾ ಮೇಳದ ಉದ್ಘಾಟನೆಯ ಸಮಾರಂಭದಲ್ಲಿ ಮಲ್ಲನಮೂಲೆ ಸುಕ್ಷೇತ್ರದ ಶ್ರೀ ಗುರು ಕಂಬಳೀಶ್ವರ ಮಠದ ಶ್ರೀ **ಚನ್ನಬಸವ ಸ್ವಾಮಿಗಳವರು** ಸುತ್ತೂರು ಜಾತ್ರೆ ಕರ್ನಾಟಕದ ಹೆಮ್ಮೆ. ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಭಕ್ತಾದಿಗಳಿಗೆ ಹಾಗೂ ರೈತಾಪಿ ವರ್ಗದವರಿಗಲ್ಲದೆ ಸರ್ವಜನೋಪಯೋಗಿ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಸಂತಸ ವ್ಯಕ್ತಪಡಿಸಿದರು. –ಟಿ.ಬಿ. ಪುಣ್ಯ



# ನಿತ್ಯ ನವನವೀನವಾಗಿರಲಿ ದಾಂಪತ್ಯ

## ನೂತನ ದಂಪತಿಗಳಿಗೆ ಸಿಎಂ ಹೆಚ್ಡಿಕೆ ಹಾರೈಕೆ

**ಸುತ್ತೂರು ಶ್ರೀಕ್ಷೇತ್ರ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಶನಿವಾರದ ಕಾರ್ಯಕ್ರಮಗಳಿಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು.

ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿಗಳಾದ ಶ್ರೀ ಹೆಚ್. ಡಿ. ಕುಮಾರಸ್ವಾಮಿಯವರು ಮನುಷ್ಯನ ಜೀವನದಲ್ಲಿ ದಾಂಪತ್ಯದ ಜೀವನಕ್ಕೆ ಪಾದಾರ್ಪಣೆ ಮಾಡುವುದು ಒಂದು ಮಹತ್ತರವಾದ ಘಟ್ಟ. ಅದು ಪುಣ್ಯಭೂಮಿಯಾದ ಸುತ್ತೂರಿನಲ್ಲಿ ಅದರಲ್ಲೂ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಪೂಜ್ಯರ ಸಮ್ಮುಖದಲ್ಲಿ ನವ ವಧು–ವರರಾಗಿ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿರುವುದು ನಿಮ್ಮೆಲ್ಲರ ಸೌಭಾಗ್ಯ ಇಂತಹ ಶ್ರೇಷ್ಠವಾದ ಸಾಮೂಹಿಕ ವಿವಾಹದಲ್ಲಿ ಭಾಗವಹಿಸುವ ಎಲ್ಲಾ ವಧು ವರರಿಗೆ ತಾಯಿ ಚಾಮುಂಡೇಶ್ವರಿ ಹಾಗೂ ಶ್ರೀಗಳ ಆಶೀರ್ವಾದ ಇರುತ್ತದೆ. ನಿಮ್ಮ ಮುಂದಿನ ಜೀವನ ಉತ್ತಮವಾಗಿರಲಿ ಎಂದು ಆಶಿಸುತ್ತೇನೆ. ಸುತ್ತೂರು ಶ್ರೀಕ್ಷೇತ್ರಕ್ಕೂ ನನಗೂ ಅವಿನಾಭಾವ ಸಂಬಂಧವಿದೆ. ಶ್ರೀಮಠಕ್ಕೆ ನಾವೆಲ್ಲಾ ಶ್ರದ್ಧೆ, ಗೌರವದೊಡನೆ ಭಕ್ತರಾಗಿ ಆಗಮಿಸುತ್ತೇವೆ. ಪರಮಪೂಜ್ಯರು ನಮ್ಮೆಲ್ಲರ ಸುಖ ದುಃಖಗಳಲ್ಲಿ ಪಾಲ್ಗೊಂಡು ಸರ್ಕಾರ ಯೋಜಿಸಬೇಕಾದ ಕಾರ್ಯಕ್ರಮಗಳನ್ನೆಲ್ಲಾ ತಾವೇ ಸ್ವತಃ ತಮ್ಮ ಜವಾಬ್ದಾರಿಯಂತೆ **7ನೇ ಪುಟಕ್ಕೆ**




**ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮತ್ತು ಶಾಸಕರಾದ ಶ್ರೀಮತಿ ಅನಿತಾ ಕುಮಾರಸ್ವಾಮಿಯವರು ಉದ್ಘಾಟಿಸಿದರು. ಚಿತ್ರದಲ್ಲಿ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ನಿಂಬಾಳ ಶ್ರೀ ಶಾಂತಲಿಂಗೇಶ್ವರ ಮಠದ ಶ್ರೀ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು, ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಸಿ. ಬೋಜೇಗೌಡ, ಶ್ರೀ ಸಿ.ಎಸ್. ಪುಟ್ಟರಾಜು, ಡಾ. ಶಾಮನೂರು ಶಿವಶಂಕರಪ್ಪ, ಪದ್ಮಶ್ರೀ ಡಾ. ಶ್ರೀಮತಿ ಸುಧಾ ಮೂರ್ತಿ, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಸಾ.ರಾ. ಮಹೇಶ್, ಶ್ರೀ ಡಿ.ಸಿ. ತಮ್ಮಣ್ಣ, ಡಾ. ಯತೀಂದ್ರ ಸಿದ್ದರಾಮಯ್ಯ ಮೊದಲಾದವರಿದ್ದಾರೆ.**

# ಶಿಕ್ಷಣವೇ ಭವಿಷ್ಯದ ಬುನಾದಿ

## ಚಿತ್ರನಟ ಶ್ರೀ ದರ್ಶನ್ ತೂಗುದೀಪ

ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ರಾಜ್ಯಮಟ್ಟದ ಭಜನಾ ಮೇಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಚಲನಚಿತ್ರ ನಟರಾದ ಶ್ರೀ ದರ್ಶನ್ ತೂಗುದೀಪರವರು ಈ ಸಂಸ್ಥೆಯ ವಿದ್ಯಾರ್ಥಿ ಎನಿಸಿಕೊಳ್ಳಲು ನನಗೆ ಹೆಮ್ಮೆಯಾಗುತ್ತದೆ ಅಭಿಮಾನದ ನುಡಿಗಳನ್ನಾಡಿದ ಅವರು, ಹಿಂದೆ ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿಯು ಕಷ್ಟದಲ್ಲಿತ್ತು. ನಮ್ಮ ತಂದೆಯವರು ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದರು. ಆ ಸಂದರ್ಭದಲ್ಲಿ ಸುತ್ತೂರು ಜಗದ್ಗುರುಗಳವರು ಜೆಎಸ್ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಉಚಿತವಾಗಿ



ಕೊಡಿಸುವುದರ ಮೂಲಕ ನಮ್ಮ ಪಾಲಿಗೆ ದೇವರಾಗಿದ್ದಾರೆ. ಕಾರಣಾಂತರಗಳಿಂದ ಶಿಕ್ಷಣ ಮೊಟಕುಗೊಳಿಸಬೇಕಾಯಿತು.

ವಿದ್ಯಾರ್ಥಿಗಳಿಗೆ ತಿಳಿಸುವುದೇನೆಂದರೆ ಶಿಕ್ಷಣವೇ ಭವಿಷ್ಯದ ಬುನಾದಿಯಾಗಿದ್ದು ತಾವೆಲ್ಲರೂ ಉನ್ನತ ವ್ಯಾಸಂಗದ ಕಡೆಗೆ ಗಮನಹರಿಸಬೇಕಾಗಿದೆ. ಈ ಸಂಸ್ಥೆಗೂ ನನಗೂ ಅವಿನಾಭವ ಸಂಬಂಧವಿದ್ದು ನಾನು ಎಂದಿಗೂ ಶ್ರೀಮಠಕ್ಕೆ ಚಿರಋಣಿಯಾಗಿರುತ್ತೇನೆ ಎಂದು ನುಡಿದರು. – ವಿ. ಪ್ರಿಯದರ್ಶಿನಿ

# ಮಾನವ ಮಹದೇವನಾಗಬಹುದು

ಮನುಷ್ಯತ್ವದಿಂದ ದೈವತ್ವದ ಕಡೆಗೆ ಸಾಗುವುದೇ ಮಾನವ ಜನ್ಮದ ಮುಖ್ಯ ಆಶಯವಾಗಿದೆ ಎಂದು ತಿಪಟೂರಿನ ಶ್ರೀ ಕೆರಗೋಡಿ – ರಂಗಾಪುರ ಸುಕ್ಷೇತ್ರದ ಶ್ರೀ **ಗುರುಪರದೇಶಿಕೇಂದ್ರ ಮಹಾಸ್ವಾಮಿಗಳವರು** ತಿಳಿಸಿದರು. ರಾಜ್ಯಮಟ್ಟದ ಭಜನಾಮೇಳ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದ ಶ್ರೀಗಳು ಅಜ್ಞಾನಿಗಳಲ್ಲಿ ಸುಜ್ಞಾನ ಮೂಡಿಸುವಲ್ಲಿ ಹಾಗೂ ಪ್ರತಿಯೊಬ್ಬರಿಗೂ ಧರ್ಮ, ಸಂಸ್ಕೃತಿ ವಿಚಾರದಲ್ಲಿ ಅರಿವು ಮೂಡಿಸುವಲ್ಲಿ ಶ್ರೀಮಠದ ಕಾರ್ಯವು ಶ್ಲಾಘನೀಯವಾಗಿದೆ. ಮಾನವ ಜನ್ಮ ಅತ್ಯಂತ ಶ್ರೇಷ್ಠವಾದದ್ದು, ಅದನ್ನು ಹಾನಿ ಮಾಡಿಕೊಳ್ಳದೆ ಪರಮಾತ್ಮನ ಸೇವೆಗೆ ಸದಾ ಮುಡಿಪಾಗಿಡಬೇಕು.



ಪ್ರಸಕ್ತ ವರ್ಷ ರಾಜ್ಯದ ಉದ್ದಗಲಕ್ಕೂ ಭೀಕರ ಬರಗಾಲ ತಲೆದೋರಿದ್ದರೂ ಸಹ ಅಸಂಖ್ಯಾತ ಭಕ್ತ ಸಮೂಹಕ್ಕೆ ಅನ್ನ ದಾಸೋಹವನ್ನು ಏರ್ಪಡಿಸಿರುವ ಶ್ರೀಮಠದ ಸಾಮರ್ಥ್ಯಕ್ಕೆ ಶ್ರೀಮಠವೇ ಸಾಟಿಯಾಗಿದೆ ಎಂದು ನುಡಿದರು.

–ಜೆ.ಎನ್. ಕುಮಾರ್



# ಅರಿತು ಬಾಳಿದರೆ ಜೀವನ ಸುಧೆ...

## ಡಾ. ಸುಧಾಮೂರ್ತಿಯವರಿಂದ ನೂತನ ದಂಪತಿಗಳಿಗೆ ಕಿವಿಮಾತು

ಇಂದು ಆಡಂಬರದ ಮದುವೆಗಳು ಹೆಚ್ಚಾಗುತ್ತಿದ್ದು, ಜನರು ಮದುವೆ ಮಾಡಲು ಅಧಿಕ ಹಣ ಖರ್ಚು ಮಾಡಿ ಆರ್ಥಿಕ ನಷ್ಟಕ್ಕೆ ಗುರಿಯಾಗಿ ಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಎಲ್ಲರೂ ಸರಳ ಮದುವೆಗಳಿಗೆ ಒತ್ತು ನೀಡಬೇಕು. ಮದುವೆ ಸರಳವಾಗಿರಬೇಕು ಮದುವೆಯಾದ ಮೇಲೆ ಬದುಕು ಅದ್ದೂರಿಯಾಗಿರಬೇಕು. ಮದುವೆಯಾದ ಮೇಲೆ ದಂಪತಿಗಳು ಸುಖ, ಶಾಂತಿ, ನೆಮ್ಮದಿಯಿಂದ ಜೀವನ ನಡೆಸಬೇಕು ಎಂದು ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಪದ್ಮಶ್ರೀ ಡಾ. ಶ್ರೀಮತಿ ಸುಧಾಮೂರ್ತಿರವರು ಅಭಿಪ್ರಾಯಪಟ್ಟರು.

ಜಾತ್ರಾ ಮಹೋತ್ಸವದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾಂಗಲ್ಯ ವಿತರಣೆ ಮಾಡಿ ಮಾತನಾಡಿದ ಅವರು ನಮ್ಮ ಸಮಾಜದಲ್ಲಿ ಇಂದಿಗೂ ಹೆಣ್ಣುಮಗು ಜನಿಸಿದ ತಕ್ಷಣ, ಅಯ್ಯೋ ಹೆಣ್ಣು ಮಗು ಆಯಿತಲ್ಲ ಎಂದು ಚಿಂತೆ ಮಾಡುತ್ತಾರೆ. ಹೆಣ್ಣು ಮಕ್ಕಳಿಗೆ ಸರಿಯಾದ ಶಿಕ್ಷಣವನ್ನು ಕೊಡಿಸದೆ ಆಡಂಬರದ 7ನೇ ಪುಟಕ್ಕೆ



ಪುಷ್ಪಾಲಂಕಾರದಿಂದ ಸುರಲೋಕವೇ ಧರೆಗಿಳಿದಂತಿರುವ ಕರ್ತೃ ಗದ್ದುಗೆ

# ಹಲವು ಕಲೆ ಒಂದೇ ವೇದಿಕೆ

ರಾಜ್ಯ ಮಟ್ಟದ ಭಜನಾ ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಮಾಜಿ ಸಚಿವರು ಹಾಗೂ ಆಯುಕ್ತರಾದ ಶ್ರೀ **ಪಿ.ಜಿ.ಆರ್.ಸಿಂಧ್ಯಾರವರು** ಸುತ್ತೂರು ಕ್ಷೇತ್ರವು ಪಾರಂಪರಿಕ ಇತಿಹಾಸವುಳ್ಳ ಹೆಮ್ಮೆಯ ಕ್ಷೇತ್ರವಾಗಿದೆ ಮತ್ತು ದೇಶ ವಿದೇಶಗಳಲ್ಲೂ ಶೈಕ್ಷಣಿಕ, ಆಧ್ಯಾತ್ಮಿಕತೆಗೆ ಹೆಸರಾದ ಸುತ್ತೂರು, ರಾಜ್ಯದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರನ್ನು ಮಾಡಿದೆ ಮತ್ತು ಇಲ್ಲಿ ಶಿಕ್ಷಣ ಜ್ಞಾನವನ್ನು ಪಡೆದ ಅನೇಕರು ಪ್ರಪಂಚದ ಇತರೆ ಭಾಗಗಳಲ್ಲಿ ಉನ್ನತ ಮಟ್ಟದ ನಾಯಕರುಗಳಾಗಿರುವುದೇ ಸುತ್ತೂರು ಕ್ಷೇತ್ರದ ಬಹು ದೊಡ್ಡ ಸಾಧನೆ ಯಾಗಿದೆ. ಬಸವಣ್ಣ ನವರ ತತ್ವದಂತೆ ಸತ್ಯ, ಸಮಾನತೆ ಜಾತ್ಯಾತೀತ ಮನೋಭಾವ ಇವು ಎಲ್ಲವು ಸೂರ್ಯ ಚಂದ್ರರ ಹಾಗೆ ಶಾಶ್ವತ ವಿಚಾರಗಳಾಗಿವೆ.



ವಿಶೇಷವಾಗಿ ಶ್ರೀಗಳು ಪೀಠಾಧ್ಯಕ್ಷರಾದ ಮೇಲೆ ಕಳೆದ 40 ವರ್ಷಗಳಲ್ಲಿ ಶ್ರದ್ಧೆ, ತ್ಯಾಗ ಮತ್ತು ಪರಿಶ್ರಮದ ಫಲವಾಗಿ ಸುತ್ತೂರು ದೇಶ ವಿದೇಶದಲ್ಲೂ ಶ್ರೀಕ್ಷೇತ್ರದ ಕೀರ್ತಿ ಎಲ್ಲೆಡೆ ಹಂಚಿದೆ. ಅಮೆರಿಕದಲ್ಲಿ ಬಸವ ಕೇಂದ್ರ ಸ್ಥಾಪನೆ ಮಾಡಿ ಬಸವಣ್ಣನವರ ವಿಚಾರಗಳನ್ನು ಎಲ್ಲೆಡೆ ತಲುಪಿಸುವಲ್ಲಿ ಶ್ರೀಗಳ ಪಾತ್ರ ಯಶಸ್ವಿಯಾಗಿದೆ.

ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ನಾಡಿನ ಎಲ್ಲಾ ಕಲೆಗಳನ್ನು ಒಂದೇ ವೇದಿಕೆಯಲ್ಲಿ ನೋಡುವ ಭಾಗ್ಯ ಲಭಿಸಿದೆ ಎಂದರೆ ಅದು ಸುತ್ತೂರು ಶ್ರೀಕ್ಷೇತ್ರದ ಮಹಿಮೆ. ಕೊನೆಯದಾಗಿ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ ಮತ್ತು ಅವರ ಸಾಧನೆಗಳನ್ನು ಸ್ಮರಿಸುತ್ತಾ ತಮ್ಮ ಮಾತಿಗೆ ವಿರಾಮ ಹೇಳಿದರು.

– ಹರ್ಷಿತ.ಎಂ

# ಸಂವಿಧಾನದ ಆಶಯ ಪಾಲನೆ : ಡಾ. ಹೆಚ್‌ಸಿಎಂ

ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ರಾಜ್ಯಮಟ್ಟದ ಭಜನಾಮೇಳಾ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಮಾಜಿ ಸಚಿವರಾದ **ಡಾ. ಹೆಚ್.ಸಿ. ಮಹದೇವಪ್ಪನವರು** ಈ ಜಾತ್ರೆಯು ಜನರನ್ನು ಒಗ್ಗೂಡಿಸುವ ಹಬ್ಬಕ್ಕಷ್ಟೇ ಸೀಮಿತವಲ್ಲದೇ ರಾಜ್ಯದ ಎಲ್ಲಾ ವಿವಿಧ ಸಮುದಾಯಗಳನ್ನು ಒಂದುಗೂಡಿಸಿ ನಾವೆಲ್ಲರೂ ಭಾರತೀಯರು ಎಂಬಂತಹ ಭಾವನೆಯನ್ನು ಮೂಡಿಸುವಂತಹ ಒಂದು ಧಾರ್ಮಿಕ ಮಹೋತ್ಸವ. ಈ ಉತ್ಸವವು ಎಲ್ಲ ರಾಜಕೀಯ ಪಕ್ಷಗಳು, ದ್ವೇಷ, ಅಸೂಯೆ, ಸೇಡು, ಮನಸ್ತಾಪಗಳನ್ನು ಮರೆತು ಜನರ ನಡುವೆ ಕಾಣಿಸಿಕೊಂಡು ರಾಜಕೀಯ ಅಭಿವೃದ್ಧಿಯೆಡೆಗೆ ಸಾಗಲು ವೇದಿಕೆಯಾಗಿದೆ. ಧರ್ಮ ಧರ್ಮಗಳ ನಡುವೆ ಇಂದು ಜಿಜ್ಞಾಸೆ, ಯುದ್ಧ, ವೈಮನಸ್ಸಾಗಲಿಲ್ಲ. ಆದರೆ ಧರ್ಮವನ್ನು ಅಧರ್ಮವನ್ನಾಗಿಸಿದಾಗ ಒಂದು ಧರ್ಮ ಇನ್ನೊಂದು ಧರ್ಮದ ವಿರುದ್ಧ ಗುರಿಯಾಗಿಸುವುದು ಈ ದೇಶದ ಧಾರ್ಮಿಕ ಪರಿಸ್ಥಿತಿಯಾಗಿದೆ. ಸಂವಿಧಾನದ ಆಶಯದಂತೆ, ಸಮಾನತೆ, ಸ್ವಾತಂತ್ರ್ಯ, ಸೋದರತ್ವ ನ್ಯಾಯದ ಪರಿಕಲ್ಪನೆಗೆ ವಿರುದ್ಧವಾದ ಪರಿಸ್ಥಿತಿಗಳಲ್ಲಿಯೂ ಈ ಸಂವಿಧಾನದ ಆಶಯಗಳ ತಿರುಳನ್ನು ಜನರಿಗೆ ತಿಳಿಸುವುದರ ಮೂಲಕ ಎಲ್ಲರೂ ಒಟ್ಟಾಗಿ ರಾಜ್ಯ ಮತ್ತು ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಅಸಮಾನತೆಯ ಸಮಾಜದ ಸತ್ಪಥದೆಡೆ ಕೊಂಡೊಯ್ಯುವತ್ತ ಶ್ರೀಮಠ ಪ್ರೇರಣೆಯಾಗಿ ರಾಜ್ಯಾಂಗಕ್ಕೆ ಮಾರ್ಗದರ್ಶಿಯಾಗಿದೆ ಎಂದರಲ್ಲದೇ, ಅಸ್ಪೃಶ್ಯತೆ ಮತ್ತು ಸ್ತ್ರೀ ಸಮಾನತೆ ಹಾಗು ಮೌಢ್ಯತೆಯನ್ನು ನಿರ್ಮೂಲನೆ ಮಾಡಲು ಹೋರಾಡಿದ ಬುದ್ಧ, ಬಸವ, ಅಂಬೇಡ್ಕರ್‌ರವರ ಆಶಯಗಳನ್ನು ಅಕ್ಷರಸಹ ಪಾಲಿಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ನುಡಿದರು. – ಚೈತ್ರ ಎಂ.





ಶುಕ್ರವಾರ ರಾತ್ರಿ ಚನ್ನಪಟ್ಟಣದ ಶ್ರೀ ಕೆಂಗಲ್ ಆಂಜನೇಯ ಸಾಂಸ್ಕೃತಿಕ ಟ್ರಸ್ಟ್‌ನ ಕಲಾವಿದರು ಅಭಿನಯಿಸಿದ ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ ನಾಟಕದ ಒಂದು ದೃಶ್ಯ




**3 ಫೆಬ್ರವರಿ 2019**

**ಪ್ರಾತಃಕಾಲ 4.00 : ಕರ್ತೃಗದ್ದುಗೆ : ಮಹಾರುದ್ರಾಭಿಷೇಕ**

**ಬೆಳಗ್ಗೆ 6.00 : ಶಿವದೀಕ್ಷೆ :** ಶ್ರೀಮಠದ ಗುರುಪರಂಪರೆಯ ಸಂಸ್ಮರಣೋತ್ಸವ, ಮಂತ್ರಮಹರ್ಷಿ ಗದ್ದುಗೆಗೆ ರುದ್ರಾಭಿಷೇಕ

**53ನೆಯ ಲಿಖಿತಮಂತ್ರ ಸಂಸ್ಮರಣೋತ್ಸವ : ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಗದ್ದುಗೆಗೆ ರುದ್ರಾಭಿಷೇಕ**

**ಬೆಳಗ್ಗೆ 6.30:** ಬದನವಾಳು: ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನಾ ಪಥಸಂಚಲನ

**ಬೆಳಗ್ಗೆ 7.30 : ಷಟ್‌ಸ್ಥಲ ಧ್ವಜಾರೋಹಣ : ನಿ.ಪ್ರ.ಸ್ವ.ಶ್ರೀ ಗುರುಸಿದ್ದೇಶ್ವರ ಸ್ವಾಮಿಗಳು,** ಶ್ರೀ ರಾಮಯೋಗೀಶ್ವರ ಮಠ, ಬೇಬಿ ಬೆಟ್ಟ, ಪಾಂಡವಪುರ ತಾ.

**ಧರ್ಮಸಂದೇಶ : ಷ.ಬ್ರ.ಶ್ರೀ ನಾಗಭೂಷಣ ಶಿವಯೋಗಿ,** ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೋಳೋಡಿ ಬಸವೇಶ್ವರ ಶಿವಯೋಗಿ ಸಂಸ್ಥಾನ, ಬೃಹನ್ಮಠ, ಹೆಬ್ಬಾಳು, ಗಂಗಾವತಿ ತಾ.

**ಬೆಳಗ್ಗೆ 8.00 : ಆದಿಜಗದ್ಗುರುಗಳವರ ಉತ್ಸಮೂರ್ತಿಗೆ, ರುದ್ರಾಭಿಷೇಕ, ರಾಜೋಪಚಾರ**

**ರಥೋತ್ಸವ : ಬೆಳಗ್ಗೆ 10.55**

ವಿ.ಸೂ.: ಶಿವದೀಕ್ಷೆ ಪಡೆಯಬಯಸುವವರು 2.2.2019ರಂದು ಸಂಜೆ ಬಂದು ಶ್ರೀಕ್ಷೇತ್ರದಲ್ಲಿ ಹೆಸರು ನೊಂದಾಯಿಸಿಕೊಳ್ಳುವುದು

**ಸಂಜೆ 6.00 : ಮಹಾರುದ್ರಾಭಿಷೇಕ**

**ರಾತ್ರಿ 9.00 : ಶ್ರೀ ನಂಜುಂಡೇಶ್ವರರು, ಶ್ರೀ ಜಗಜ್ಜ್ಯೋತಿ ಬಸವೇಶ್ವರರು, ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರು, ಜಗದ್ಗುರು ಶ್ರೀ ಈಶಾನೇಶ್ವರ ಒಡೆಯರು, ಜಗದ್ಗುರು ಶ್ರೀ ಘನಲಿಂಗ ಶಿವಯೋಗಿಗಳವರ ಉತ್ಸವ**

**ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು ಮತ್ತು ಕಾಯಕತಪಸ್ವಿ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳವರ ಭಾವಚಿತ್ರಗಳ ಉತ್ಸವ**



# ಪುಣ್ಯ ಕ್ಷೇತ್ರದ ದರ್ಶನ ಮಾನವ ಜನ್ಮ ಪಾವನ

**● ಶ್ರೀ ಸಿದ್ದರಾಮ ಶಿವಾಚಾರ್ಯ ಸ್ವಾಮಿಗಳು**

ಸುತ್ತೂರು ಶ್ರೀಕ್ಷೇತ್ರದಲ್ಲಿ ಶನಿವಾರ ಮುಂಜಾನೆ ಸ್ನೇಹ–ಸೌಹಾರ್ದ–ಶಾಂತಿ ಪ್ರಾರ್ಥನ ಪಥಸಂಚಲನ ಕಾರ್ಯಕ್ರಮ ಜರುಗಿತು. ಊರಿನ ಪ್ರಮುಖ ಬೀದಿಗಳಲ್ಲಿ ಶಾಲಾ ಮಕ್ಕಳ ಪಥ ಸಂಚಲನದೊಂದಿಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ ಊರಿನ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ಮಾಡಿದರು.

ಯಳಂದೂರು ತಾಲ್ಲೂಕು ಅಗರ ಗ್ರಾಮದ ಶ್ರೀ ಕಲ್ಲು ಮಠದ ನಿ.ಪ್ರ.ಸ್ವ. ಶ್ರೀ ಸಿದ್ಧಮಲ್ಲಸ್ವಾಮಿಗಳವರು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿ ಆಶೀರ್ವಚನ ನೀಡುತ್ತಾ “ಇವತ್ತು ಮಾನವರಿಗೆ ನೆಮ್ಮದಿ ಸಿಗುತ್ತಿಲ್ಲ, ನೆಮ್ಮದಿಗಾಗಿ ಪರಿತಪಿಸುತ್ತಿದ್ದಾರೆ ಅದಕ್ಕಾಗಿಯೇ ಪರಮಪೂಜ್ಯ ಶ್ರೀಗಳು ಜನತೆಗೆ ಶಾಂತಿ, ಸೌಹಾರ್ದತೆ ಮತ್ತು ಎಲ್ಲಾ ಜನಾಂಗದವರು ಭಾಗವಹಿಸಿ ಇಂತಹ ಧಾರ್ಮಿಕ ಕಾರ್ಯಕ್ರಮಗಳನ್ನು ನೋಡಿ ನೆಮ್ಮದಿ ಕಲ್ಪಿಸಿಕೊಳ್ಳಲಿ ಎಂದು ಈ ರೀತಿಯ ಜಾತ್ರಾ ಮಹೋತ್ಸವಗಳನ್ನು ಏರ್ಪಡಿಸುತ್ತಿದ್ದಾರೆ ಮತ್ತು ರೈತರು, ವಿದ್ಯಾರ್ಥಿಗಳು ಇಲ್ಲಿನ ವಸ್ತು ಪ್ರದರ್ಶನದ ಕೃಷಿಮೇಳಕ್ಕೆ ಭೇಟಿ ನೀಡಿ ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು. ನಾವು ಶ್ರೀಗಳ ಜೊತೆ ಅನೇಕ ಸಮಾರಂಭಗಳು ಮತ್ತು ಮಹೋತ್ಸವಗಳಲ್ಲಿ ಭಾಗವಹಿಸಿದ್ದೇವೆ. ಅದು ನನ್ನ ಪುಣ್ಯವೆಂದು ಭಾವಿಸುತ್ತೇನೆ ಎಂದು ನುಡಿದರು.

ಅಫ್ಜಲ್‌ಪುರ ತಾಲ್ಲೂಕು ಚಿನ್ಮಯಗಿರಿ ಗ್ರಾಮದ ಶ್ರೀ ಮಹಂತೇಶ್ವರಮಠದ ಷ.ಬ್ರ. ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು ಧರ್ಮ ಸಂದೇಶ ನೀಡುತ್ತಾ ಕನ್ನಡ ನಾಡು ಹಾಗೂ ಸುತ್ತಮುತ್ತಲಿನ ಕ್ಷೇತ್ರಗಳ ಆದರ್ಶ ಕ್ಷೇತ್ರವೆಂದರೆ ಅದು ನಮ್ಮ ಶ್ರೀ ಸುತ್ತೂರು ಕ್ಷೇತ್ರ, ಮಾನವ ಜನ್ಮ ಶೇಷ್ಠವಾದದ್ದು ಇಂತಹ ಪುಣ್ಯ ಕ್ಷೇತ್ರಕ್ಕೆ ಬಂದು ಶ್ರೀಗಳ ಆಶೀರ್ವಾದ ಮತ್ತು ಇಲ್ಲಿನ ಪ್ರಸಾದ ಸೇವಿಸಿದರೆ ಪಾವನರಾಗುತ್ತೇವೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್‌ಸ್ಥಲ ತತ್ವಗಳು ಸುತ್ತೂರು ಶ್ರೀಕ್ಷೇತ್ರದಲ್ಲಿ ಮಾತ್ರ ಆಚರಣೆಯಲ್ಲಿವೆ. ಕಲ್ಯಾಣವೆಂಬ ಬತ್ತಿಯ ಒಳಗೆ ಭಕ್ತಿ ರಸವೆಂಬ ತೈಲವನ್ನು ಶ್ರೀಕ್ಷೇತ್ರಕ್ಕೆ ಭಕ್ತಾದಿಗಳು ಎರೆಯುತ್ತಿದ್ದಾರೆ. ಈ ಕ್ಷೇತ್ರಕ್ಕೆ ಬಂದು ಶ್ರೀಗಳವರ ಆಶೀರ್ವಾದ ಪಡೆಯುವುದು ನಮ್ಮೆಲ್ಲರ ಜೀವನದಲ್ಲಿ ಮರೆಯಲಾಗದ ಕ್ಷಣವೆಂದು ನುಡಿದರು.

–ಹೆಚ್.ಆರ್. ಆದರ್ಶ್

## ಶಿವ ಜ್ಞಾನ ದರ್ಶನ ವಿಶೇಷತೆ

# 18 ಅಡಿ ಶಿವಲಿಂಗದ ಮಹಾದರ್ಶನ

*** ಆರೋಗ್ಯ ದರ್ಶನ**

*** ಅನ್ನ ದೇವ ಕೃಷಿಕರ ಜೀವನ ದರ್ಶನ ಪ್ರದರ್ಶನ**



ಜಾತ್ರಾ ಮಹೋತ್ಸವದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದ ವತಿಯಿಂದ ಶಿವ ಜ್ಞಾನ ದರ್ಶನ, ವಿಶ್ವ ಪರಿವರ್ತನಾ ಪ್ರದರ್ಶನ ಏರ್ಪಡಿಸಲಾಗಿದೆ. 18 ಅಡಿ ಶಿವಲಿಂಗದ ಮಹಾದರ್ಶನ ಭಕ್ತ ಸಮುದಾಯವನ್ನು ತನ್ನತ್ತ ಆಕರ್ಷಿಸುತ್ತಿದ್ದು 18 ಅಡಿ ಎತ್ತರದ ಶಿವಲಿಂಗಕ್ಕೆ ಒಂದು ಲಕ್ಷ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದ್ದು, ಶಿವಪ್ರಭೆಯಂತೆ ಕಂಗೊಳಿಸುತ್ತಿದೆ.

ಇಲ್ಲಿ ಆರೋಗ್ಯ ಮಾರ್ಗದರ್ಶನ ದಡಿಯಲ್ಲಿ ಆರೋಗ್ಯದ ಕುರಿತು ಮಾಹಿತಿ ನೀಡಲಾಗುತ್ತಿದೆ. ಮನುಷ್ಯ ಆರೋಗ್ಯಯುತ ಜೀವನವನ್ನು ನಡೆಸಬೇಕಾದರೆ ಮಾನಸಿಕ ಶಾಂತಿ ಅತಿಮುಖ್ಯ. ಆದರೆ ಇಂದು ಮನುಷ್ಯ ಒತ್ತಡದ ಜೀವನ ನಡೆಸುತ್ತಿದ್ದು, ಅನೇಕ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಒಳಗಾಗುತ್ತಿದ್ದಾನೆ, ಆದ್ದರಿಂದ ಮನುಷ್ಯ ಶಾಂತಿ ಮತ್ತು ನೆಮ್ಮದಿಯನ್ನು ಕಾಪಾಡಿಕೊಂಡು ಆರೋಗ್ಯವಂತನಾಗಿ, ಸಂತೋಷದಿಂದ ಬದುಕಲು ಆಧ್ಯಾತ್ಮಿಕ ಒಲವು ಅತ್ಯಗತ್ಯ. ಭಕ್ತಿ ಮಾರ್ಗದಿಂದ, ಸರಳ ಜೀವನ ನಡೆಸಿದರೆ ಮನುಷ್ಯನಿಗೆ ಮುಕ್ತಿ ಲಭಿಸುತ್ತದೆ ಇವೇ ಮೊದಲಾದ ವಿಷಯಗಳನ್ನು ಇಲ್ಲಿ ನಾವು ತಿಳಿಯಬಹುದಾಗಿದೆ.

ಅನ್ನದೇವ ಕೃಷಿಕರ ಜೀವನದರ್ಶನ ಪ್ರದರ್ಶನದಡಿಯಲ್ಲಿ ಮನುಷ್ಯನ ಆರೋಗ್ಯ ಕಾಪಾಡಿಕೊಳ್ಳಲು ಆಹಾರ ಬಹಳ ಮುಖ್ಯ, ‘ಅನ್ನ ದೇವರಿಗಿಂತ ಇನ್ನು ದೇವರುಂಟೆ’ ಎಂಬಂತೆ ಆಹಾರ ಪದ್ಧತಿ ಒಂದು ಸಂಸ್ಕೃತಿಯಾಗಿದೆ. ರೈತರ ಜೀವನ ಉತ್ತಮವಾಗಿದ್ದರೆ ದೇಶವೂ ಸಹ ಉತ್ತಮವಾಗಿರುತ್ತದೆ. ರೈತರ ಏಳಿಗೆಯಿಂದ ದೇಶದ ಪ್ರಗತಿ. ಆದ್ದರಿಂದ ರೈತರ ಏಳಿಗೆಗಾಗಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯವು ವ್ಯವಸಾಯ ಮತ್ತು ಗ್ರಾಮೀಣ ವಿಕಾಸ ವಿಭಾಗದ ಮುಖಾಂತರ ರೈತರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಇಂದು ಆಧುನಿಕ ಕೃಷಿಯ ಪರಿಣಾಮವಾಗಿ ಕ್ರಿಮಿನಾಶಕಗಳ ಬಳಕೆ ಹೆಚ್ಚಾಗಿದ್ದು, ಆಹಾರ ಪದಾರ್ಥಗಳು ವಿಷಮಯವಾಗುತ್ತಿವೆ. ಆದ್ದರಿಂದ ನೈಸರ್ಗಿಕ ಕೃಷಿಯ ಕಡೆ ರೈತರು ಮುಖ ಮಾಡಬೇಕಾಗಿದೆ ಎಂಬ ಈ ಎಲ್ಲಾ ವಿಚಾರಗಳನ್ನು ಇಲ್ಲಿ ತಿಳಿಸಿ ಕೊಡಲಾಗುತ್ತಿದೆ. –ಎಸ್. ಸೋಮೇಶ್

## ಸಾಂಸ್ಕೃತಿಕ ಮೇಳದ ಫಲಿತಾಂಶ

ಶಾಸ್ತ್ರೀಯ ಸಂಗೀತದಲ್ಲಿ ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆ ಪ್ರಥಮ, ಬಂಡಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆ ದ್ವಿತೀಯ, ಕಾಮಗೆರೆಯ ಜೆಎಸ್‌ಎಸ್ ಪ್ರೌಢಶಾಲೆ ತೃತೀಯ, ಮನುಗನಹಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆ ನಾಲ್ಕನೇಯ, ಬಹುಮಾನವನ್ನು ಪಡೆದುಕೊಂಡರು.

ವಚನಾಧಾರಿತ ನೃತ್ಯದಲ್ಲಿ ಹುಲ್ಲಹಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆ (ಕನ್ನಡ ಮಾಧ್ಯಮ) ಪ್ರಥಮ, ಹುಲ್ಲಹಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆ (ಇಂಗ್ಲಿಷ್ ಮಾಧ್ಯಮ) ದ್ವಿತೀಯ, ಮಾಲೂರಿನ ಜೆಎಸ್‌ಎಸ್ ಪ್ರೌಢಶಾಲೆ ತೃತೀಯ, ಸರಗೂರಿನ ಜೆಎಸ್‌ಎಸ್ ಪ್ರೌಢಶಾಲೆ ನಾಲ್ಕನೇಯ ಹಾಗೂ ಕೆ.ಆರ್. ನಗರದ ಜೆಎಸ್‌ಎಸ್ ಪ್ರೌಢಶಾಲೆ ಐದನೇ ಬಹುಮಾನವನ್ನು ಪಡೆದುಕೊಂಡರು.

ಒಟ್ಟಾರೆಯಾಗಿ ಗ್ರಾಮೀಣ ಪ್ರೌಢಶಾಲಾ ವಿಭಾಗದಲ್ಲಿ ಒಟ್ಟು 32 ಶಾಲೆಗಳು ಭಾಗವಹಿಸಿ ಒಟ್ಟು 80 ಕಾರ್ಯಕ್ರಮಗಳನ್ನು ವೈವಿಧ್ಯಮಯವಾಗಿ ನೀಡಿ ನಗರ ಪ್ರದೇಶಕ್ಕಿಂತ ತಾವೇ ಮೇಲು ಎಂಬುದನ್ನು ತೋರಿಸಿದ್ದಾರೆ. ಕೊಡಸೋಗೆ, ಹೊರೆಯಾಲ, ಬರಗಿ, ಹಳ್ಳಿಕೆರೆಹುಂಡಿ, ಗೌಡಳ್ಳಿ, ಕಲ್ಲುಣಿಕೆ, ಬಂಡಹಳ್ಳಿ, ನಾರ್ವೆ, ರಾಮಾಪುರ, ವೀರರಾಜಪುರ ಮುಂತಾದ ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ತೀರ್ಪುಗಾರರಾಗಿ ಶ್ರೀಮತಿ ಗಾಯತ್ರಿ, ಶ್ರೀಮತಿ ಪದ್ಮ ಕೃಷ್ಣಮೂರ್ತಿ ಮತ್ತು ಧರಿತ್ರಿರವರು ಭಾಗವಹಿಸಿದ್ದರು.

ಎಲ್ಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಅತಿ ಹೆಚ್ಚು ಅಂಕ ಪಡೆದ ಶಾಲೆಗೆ ಪರ್ಯಾಯ ಪಾರಿತೋಷಕ ನೀಡಲಾಗುವುದು. ಅದರಂತೆ ಈ ಸಾಲಿನಲ್ಲಿ ಹೆಚ್ಚು ಅಂಕಪಡೆದು ಎಲ್ಲಾ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದು ಜೆಎಸ್‌ಎಸ್ ಪ್ರೌಢಶಾಲೆ, ಸುತ್ತೂರು ಪರ್ಯಾಯ ಪಾರಿತೋಷಕವನ್ನು ತನ್ನದಾಗಿಸಿಕೊಂಡಿದೆ. 16ನೇ ಬಾರಿಗೆ ಸತತವಾಗಿ ಪರ್ಯಾಯ ಪಾರಿತೋಷಕವನ್ನು ತನ್ನದಾಗಿಸಿಕೊಂಡ ಹೆಮ್ಮೆ ಸುತ್ತೂರು ಪ್ರೌಢಶಾಲೆಯದು.

# ವಸ್ತುಪ್ರದರ್ಶನ: ಹಲವು ವೈವಿಧ್ಯ ಮಳಿಗೆಗಳ ಅನಾವರಣ

**ಜಾ**ತ್ರಾ ಮಹೋತ್ಸವದ ಅಂಗವಾಗಿ 350ಕ್ಕೂ ಹೆಚ್ಚು ಮಳಿಗೆಗಳಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕೈಮಗ್ಗ ಮತ್ತು ಜವಳಿ ಇಲಾಖೆಗಳ ಉತ್ಪಾದಕರು, ವಾಣಿಜ್ಯೋದ್ಯಮಿಗಳು, ಗೃಹಬಳಕೆ ವಸ್ತುಗಳ ಉತ್ಪಾದಕರು ಹಾಗೂ ಮಾರಾಟಗಾರರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಸ್ಥೆಗಳು, ಇತರ ಸಂಘ ಸಂಸ್ಥೆಗಳು, ಕೈಗಾರಿಕೋದ್ಯಮಿಗಳು, ಕರಕುಶಲ



ಕರ್ಮಿಗಳು ತಾವು ತಯಾರಿಸಿದ, ತಮ್ಮ ಸಾಧನೆಯ ಹಾದಿಯನ್ನು ತೆರೆದಿಡುತ್ತಿರುವ ಪರಿಯನ್ನು ಹೇಳುವುದಕ್ಕಿಂತ ನೀವೂ ಒಮ್ಮೆ ಜೆಎಸ್‌ಎಸ್ ಶಾಲಾ ಆವರಣದಲ್ಲಿ ಹದಿನೈದು ಎಕರೆ ವಿಸ್ತೀರ್ಣದಲ್ಲಿ ರೂಪುಗೊಂಡಿರುವ ವಸ್ತುಪ್ರದರ್ಶನವನ್ನು ಕಣ್ಣಾರೆ ನೋಡಲೇಬೇಕು.

**ವಿಶೇಷತೆಗಳು:** ದಿನಬಳಕೆ ಗೃಹ ಉಪಯೋಗಿ ವಸ್ತುಗಳು, ಯಂತ್ರಗಳು, ಮಣ್ಣು ಹಾಗೂ ಮರದಿಂದ ಮಾಡಿದ ವಸ್ತುಗಳು, ಕೈಮಗ್ಗದಲ್ಲಿ ಹತ್ತಿಯಿಂದ ತಯಾರಿಸಿದ ಬಟ್ಟೆ, ಸೀರೆ, ಪಂಚೆ, ಟವಲ್, ರೇಷ್ಮೆ ಬಟ್ಟೆಗಳ ಪ್ರದರ್ಶನ ಹಾಗೂ ಮಾರಾಟವಿದೆ. ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳಾದ ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯ, ವಿಕಲ ಚೇತನರ ಪಾಲಿಟೆಕ್ನಿಕ್, ಮಹಿಳಾ ಪಾಲಿಟೆಕ್ನಿಕ್‌ಗಳ ವತಿಯಿಂದ ತಾಂತ್ರಿಕ ವಸ್ತುಪ್ರದರ್ಶನ ಏರ್ಪಡಿಸಿದ್ದು, ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯ ವತಿಯಿಂದ Hand Gesture



ಬಳಸಿ ವಿಡಿಯೋ ನಿಯಂತ್ರಿಸುವುದು, ಧ್ವನಿ ನಿಯಂತ್ರಿತ ರೋಬೋಟ್ ಕಾರು, ಸ್ವಯಂಚಾಲಿತ ಸ್ಯಾನಿಟರಿ ಪ್ಯಾಡ್ ವಿತರಣಾ ಯಂತ್ರ, ಗೃಹಬಳಕೆಯ ರೋಬೋಟ್ ಮಾದರಿ, Hand Gesture ಬಳಸಿ ವೀಲ್‌ಚೇರ್ ನಿಯಂತ್ರಿಸುವುದು, ಪರಿಸರ ಸ್ನೇಹಿ ಶೌಚಾಲಯ, ಕಾರ್ಡ್ ಮೂಲಕ ಪಾವತಿ, ಸ್ವಯಂ ಚಾಲಿತ ಗೃಹ ನಿರ್ವಹಣೆ ಬಗ್ಗೆ ಮಾದರಿಗಳ ಮೂಲಕ, ಕಿರುಚಿತ್ರಗಳ ಪ್ರದರ್ಶನವಿದೆ.

ಜೆಎಸ್‌ಎಸ್ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ತಯಾರಿಸಿದ ತಂತ್ರಾಂಶ, ಆಧುನಿಕ ತಂತ್ರಜ್ಞಾನವನ್ನೊಳಗೊಂಡ ಮಾದರಿಗಳು, ಪಾರಂಪರಿಕ/ ಆಧುನಿಕ ಚಿನ್ನಾಭರಣಗಳ ಬಳಕೆ, ಆಭರಣ ವಿನ್ಯಾಸ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ತಯಾರಿಸಲ್ಪಟ್ಟ ಮಾದರಿ ಆಭರಣಗಳ ಪ್ರದರ್ಶನ ಹಾಗೂ ಮಾರಾಟ ಹಾಗೂ ಸಂಸ್ಥೆಯಲ್ಲಿ ವಿಶೇಷಚೇತನ ಮಕ್ಕಳು ತಾಂತ್ರಿಕ ಶಿಕ್ಷಣವನ್ನು ಪಡೆಯುವುದರ ಬಗ್ಗೆ ಅರಿವು / ಜಾಗೃತಿಯನ್ನು ಮೂಡಿಸಲಾಗುತ್ತಿದೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗವು ಪ್ರದರ್ಶಿಸಿರುವ ಶೈಕ್ಷಣಿಕ ವಸ್ತುಪ್ರದರ್ಶನವು ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಹಾಗೂ ಶೈಕ್ಷಣಿಕ ಉನ್ನತಿಗೆ ಪೂರಕವಾಗಿದೆ.

ಜೆಎಸ್‌ಎಸ್ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಘಟಕಗಳಾದ ಆಸ್ಪತ್ರೆ, ವೈದ್ಯಕೀಯ, ಆಯುರ್ವೇದ, ಔಷದ ವಿಜ್ಞಾನ, ದಂತ ವೈದ್ಯಕೀಯ, ನರ್ಸಿಂಗ್ ಶಿಕ್ಷಣ, ಫಿಜಿಯೋಥೆರಪಿ, ವಾಕ್ ಮತ್ತು ಶ್ರವಣ ಹಾಗು ಪ್ರಕೃತಿ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಪ್ರದರ್ಶನಗೊಂಡಿದೆ. ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಸಮಗ್ರ ಆರೋಗ್ಯ ತಪಾಸಣೆ, ವಿವಿಧ ವಿಭಾಗಗಳಲ್ಲಿ ದೊರೆಯುವ ಸೌಲಭ್ಯಗಳು, ಸರ್ಕಾರಿ ಹಾಗೂ ಖಾಸಗಿ ಆರೋಗ್ಯ ವಿಮಾ ಯೋಜನೆಗಳು, ರಕ್ತದಾನ, ದೇಹದಾನ ಮತ್ತು ನೇತ್ರದಾನದ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸಲಾಗುತ್ತಿದೆ. ವೈದ್ಯಕೀಯ ಮಹಾವಿದ್ಯಾಲಯದ ವತಿಯಿಂದ ದೇಹದ ವಿವಿಧ ಅಂಗಗಳ ರಚನೆ ಮತ್ತು ಕ್ರಿಯೆ, 30 ವರ್ಷ ಮೇಲ್ಪಟ್ಟವರಿಗೆ ಕೊಬ್ಬಿನಂಶ, HbA1C–ಮಧುಮೇಹಿಗಳಲ್ಲಿ ಸಕ್ಕರೆ ಪ್ರಮಾಣದ ನಿಯಂತ್ರಣ ಪರೀಕ್ಷೆ ಮಾಡಲಾಗುತ್ತಿದೆ. ಸ್ವಯಂ ಔಷಧಿ ತೆಗೆದುಕೊಳ್ಳವುದು, ಔಷಧಿಗಳ ಅಡ್ಡ ಪರಿಣಾಮ ಮತ್ತು ವೈದ್ಯರ ಸಲಹೆಗಳನ್ನು ದಾಖಲಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಕ್ಷಯರೋಗ ಪತ್ತೆ ಮತ್ತು ಹೆಚ್‌ಐವಿ ಸೋಂಕಿನ ಪರಿಶೀಲನೆಯೂ ಉಂಟು.

ಬೊಜ್ಜು, ರಕ್ತದೊತ್ತಡ, ಮಧುಮೇಹ ರೋಗಿಗಳಿಗೆ ಆಹಾರ,



ವ್ಯಾಯಮ ಪಿರಮಿಡ್ ಬಳಸಿ ಜೀವನ ಶೈಲಿ ಬದಲಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುವುದು, ಸೊಳ್ಳೆಗಳಿಂದ ಹರಡುವ ರೋಗಗಳ ಲಕ್ಷಣಗಳು, ಅವುಗಳ ನಿಯಂತ್ರಣ ಮತ್ತು ತಡೆಗಟ್ಟುವ ಬಗ್ಗೆ ಮತ್ತು ಆಹಾರ ಕಲಬೆರಕೆ ಪತ್ತೆಹಚ್ಚುವ ವಿಧಾನಗನ್ನು ಪ್ರಾತ್ಯಕ್ಷಿಕೆಗಳ ಮೂಲಕ ಮಾಹಿತಿ ನೀಡಲಾಗುತ್ತಿದೆ. ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ಮತ್ತು ಗರ್ಭ ನಿರೋಧಕ ಸಾಧನಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಫಿಜಿಯೋಥೆರಪಿ ಮಹಾವಿದ್ಯಾಲಯದ ವತಿಯಿಂದ ವಯಸ್ಕರು ಮತ್ತು ಹಿರಿಯರಲ್ಲಿ ಕಂಡುಬರುವ ಸಾಮಾನ್ಯ ತೊಂದರೆಗಳಾದ ನರ, ಸ್ನಾಯು ಮತ್ತು ಮೂಳೆಗಳಲ್ಲಿನ ಅಸ್ವಸ್ಥತೆಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ದೈಹಿಕ ಪರೀಕ್ಷೆಯನ್ನು ಮಾಡಲಾಗುತ್ತಿದೆ.

ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಸಂಸ್ಥೆ ವತಿಯಿಂದ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ವಾಕ್ ಶ್ರವಣ ಸಂಸ್ಥೆಯ ವತಿಯಿಂದ ಮಕ್ಕಳಲ್ಲಿ ಮಾತು ಮತ್ತು ಭಾಷೆಯ ಬೆಳವಣಿಗೆ,



ವಯಸ್ಸಿಗೆ ಅನುಗುಣವಾಗಿ ಮಾತನಾಡದಿರುವುದು, ಕಲಿಕೆಯ ತೊಂದರೆ, ಮಾತನಾಡಲು ಮತ್ತು ಕೇಳಿಸಿಕೊಳ್ಳಲು ಉಪಯೋಗಿಸುವ ಉಪಕರಣಗಳ ಪರಿಚಯ, ಅವುಗಳು ಕಾರ್ಯನಿರ್ವಹಿಸುವ ರೀತಿ ಮತ್ತು ತೊಂದರೆಗಳ ಬಗ್ಗೆ ಹಾಗೂ ಸರ್ಕಾರದ ಯೋಜನೆಗಳ ಬಗ್ಗೆ ಪ್ರಚುರಪಡಿಸಲಾಗುತ್ತಿದೆ.

ರಾಜ್ಯ ಸರ್ಕಾರದ ಇಲಾಖೆಗಳಾದ ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ



ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳಿಂದ ಕೈಗೊಂಡಿರುವ ವಿವಿಧ ಜನಪರ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿ ಸಾರ್ವಜನಿಕರಿಗೆ ಪ್ರಚಾರ ಪಡಿಸಿವೆ ಹಾಗೂ ರಾಜ್ಯ ಮದ್ಯ ಪಾನ ಸಂಯಮ ಮಂಡಳಿಯವರಿಂದ ಮದ್ಯಪಾನದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಮುಂದಾಗಿವೆ.

ಕೇಂದ್ರ ಸರ್ಕಾರದ ಇಲಾಖೆಗಳಾದ ಭಾರತೀಯ ಸಂಚಾರ ನಿಗಮ ಲಿ., ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ಕೇಂದ್ರ ಸರ್ಕಾರದ ಕೇಂದ್ರಿಯ ಪ್ಲಾಸ್ಟಿಕ್ ತಂತ್ರಜ್ಞಾನ ಸಂಸ್ಥೆಯವರು ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಹಮ್ಮಿಕೊಳ್ಳುವ ವಿವಿಧ ವೃತ್ತಿಪರ ತರಬೇತಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ. ಭಾರತೀಯ ಅಂಚೆ ಇಲಾಖೆಯವರು ಗ್ರಾಮೀಣ ಜನರಿಗೆ ಅಂಚೆ ಇಲಾಖೆಯಲ್ಲಿರುವ ವಿವಿಧ ಯೋಜನೆಗಳು, ಅಂಚೆ ಚೀಟಿಗಳ ಸಂಗ್ರಹ ಮತ್ತು ಮಾರಾಟ ಹಾಗೂ ಎಲ್ಲಾ ಅಂಚೆ ಉತ್ಪನ್ನಗಳ ಮಾಹಿತಿ ನೀಡುತ್ತಾರೆ. ವಾರ್ತಾ ಮತ್ತು ಪ್ರಸಾರ ಸಚಿವಾಲಯದವರು ಕೇಂದ್ರ ಸರ್ಕಾರ ರೂಪಿಸಿರುವ ಜನೋಪಯೋಗಿ ಯೋಜನೆಗಳ ಬಗ್ಗೆ ಮಾಹಿತಿಯನ್ನು ಕರಪತ್ರ, ಕಿರುಚಿತ್ರ ಇತರೆ ಪ್ರಚಾರ ಸಾಮಾಗ್ರಿಗಳ ಮೂಲಕ ಮಾಹಿತಿ ನೀಡುತ್ತಾರೆ.

ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಪ್ರಾದೇಶಿಕ ಜನಸಂಪರ್ಕ ಕಾರ್ಯಾಲಯದವರು ಆಯೋಜಿಸಿರುವ



ಮಹಾತ್ಮಗಾಂಧಿಯವರ 150ನೇ ಜನ್ಮವರ್ಷಾಚರಣೆ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ಅಪರೂಪದ ಚಿತ್ರಪ್ರದರ್ಶನ ಈ ಸಾಲಿನ ವಿಶೇಷತೆಯಾಗಿದೆ.

ಜೆಎಸ್‌ಎಸ್ ಗ್ರಂಥಮಾಲೆ, ರಾಮಕೃಷ್ಣ ಆಶ್ರಮ, ವಿವೇಕ ಜಾಗೃತಿ ಬಳಗ, ಗುರು ಬಸವಣ್ಣ ಯೋಗ ಕಮ್ಮಟ ಇವರುಗಳ ಆಧ್ಯಾತ್ಮಿಕ ಮತ್ತು ಧಾರ್ಮಿಕ ಗ್ರಂಥಗಳು, ರಾಮಕೃಷ್ಣ–ವಿವೇಕಾನಂದರ ವೇದಾಂತ ಸಾಹಿತ್ಯ, ಶರಣರ ವಚನ ಗ್ರಂಥ, ಲಿಂಗಾಯತ ತತ್ವ ಚಿಂತನೆಗಳ ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನವನ್ನು ಆಯೋಜಿಸಿದ್ದಾರೆ.

ವಸ್ತುಪ್ರದರ್ಶನದ ಆವರಣದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಸುಮಾರು 100 ಜನ ಕಲಾವಿದರು ತಮ್ಮ ಕಲಾಕೃತಿಗಳನ್ನು ಚಿತ್ರಸಂತೆಯಲ್ಲಿ ಪ್ರದರ್ಶಿಸಿ ಮಾರಾಟ ಮಾಡುತ್ತಿದ್ದಾರೆ.

ವಿವಿಧ ಬಗೆಯ, ವಿಭಿನ್ನ ಶೈಲಿಯ ಹಾಗೂ ಪ್ರಾದೇಶಿಕಾವಾರು ತಿಂಡಿ–ತಿನಿಸುಗಳ ಮಾರಾಟ ಮೇಳವನ್ನು ಏರ್ಪಡಿಸಿದ್ದು, ಇದರಲ್ಲಿ 20ಕ್ಕೂ ಹೆಚ್ಚು ಮಾರಾಟಗಾರರು ಭಾಗವಹಿಸಿದ್ದಾರೆ.

ಇತರ ಸಂಘ ಸಂಸ್ಥೆಗಳೂ ಭಾಗವಹಿಸಿ ತಮ್ಮ ಸೇವೆ ಮತ್ತು ಉತ್ಪನ್ನಗಳ ಬಗ್ಗೆ ವಸ್ತುಪ್ರದರ್ಶನಕ್ಕೆ ಭೇಟಿ ನೀಡುವ ಗ್ರಾಹಕರಿಗೆ ಪ್ರಚಾರಪಡಿಸುವುದರೊಂದಿಗೆ ಲಾಭದಾಯಕ ವಹಿವಾಟನ್ನು ನಡೆಸುತ್ತಿದ್ದಾರೆ. ●




### 3 ಫೆಬ್ರವರಿ 2019 ಭಾನುವಾರ * ಗದ್ದುಗೆ ಆವರಣ

**ಬೆಳಗ್ಗೆ 8.00 : ನಾದಸ್ವರ**
**9.00 : ಯೋಗ ಪ್ರಾತ್ಯಕ್ಷಿಕೆ :** ಪತಂಜಲಿ ಯೋಗ ಶಿಕ್ಷಣ ಸಮಿತಿ (ರಿ.), ನಂಜನಗೂಡು.
**ಮಧ್ಯಾಹ್ನ 2.00 : ನಾದಸ್ವರ :** ಶ್ರೀ ಲಕ್ಷ್ಮಣ್ ಮತ್ತು ತಂಡ, ಬೆಂಗಳೂರು.
**ಸಂಜೆ 6.30 : ಭರತನಾಟ್ಯ :** ಕು.ಜಿ.ವಿ ಹಂಸ, ಶಿವಮೊಗ್ಗ
**ರಾತ್ರಿ 7.00 : ರಸಪ್ರಶ್ನೆ : ಶರಣ ದರ್ಶನ**
**8.00 : ಸುಗಮ ಸಂಗೀತ : ಶ್ರೀ ಪೂರ್ವಜ್ ವಿಶ್ವನಾಥ್** ಮತ್ತು ತಂಡ, ಮೈಸೂರು

### ನಾಟಕಗಳು ರಾತ್ರಿ 10.00

**ಹಿರಿಯರ ಮನೆ ಆವರಣ**

**ಭಕ್ತ ಪ್ರಹ್ಲಾದ :** ಶ್ರೀ ಕಪಿಲೇಶ್ವರ ರೈತ ಸ್ವಸಹಾಯ ಸಂಘ, ಎಸ್, ಹೊಸಕೋಟೆ, ನಂಜನಗೂಡು ತಾ.

**ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ**

**ಶಿವಕುಮಾರ ಅಥವಾ ಶೂರಪದ್ಮನ ವಧೆ,** ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಆಲನಹಳ್ಳಿ, ಮೈಸೂರು ತಾ.

**ಸ.ಹಿ.ಪ್ರಾ.ಶಾಲೆ ಪಕ್ಕದ ಆವರಣ**

**ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ :** ಶ್ರೀ ಮನೆ ಮಂಚಮ್ಮ ಕೃಪಾಪೋಷಿತ ನಾಟಕ ಮಂಡಳಿ, ಬೆಳವಾಡಿ, ಮೈಸೂರು ತಾ.

## ಜಾತ್ರೆಯೊಳಗೊಂದು ಸುತ್ತು...

### ಜಾತ್ರೆ ಬಹಳ ಆನಂದ ತಂದೈತಿ



ನಾನು ಸುಮಾರು 18 ವರ್ಷಗಳಿಂದ ಜಾತ್ರೆಗೆ ಬರುತ್ತಿದ್ದು, ಜಾತ್ರೆಯ ಸೊಬಗು ನೋಡಲು ಬಹಳ ಆನಂದವಾಗುತ್ತೈತಿ. ಶ್ರೀಗಳ ದರ್ಶನ ಪಡೆಯುವ ನಾವೇ ಭಾಗ್ಯವಂತರು. ಪ್ರತಿವರ್ಷವೂ ಉನ್ನತ ರೀತಿಯಲ್ಲಿ ಕಾರ್ಯಕ್ರಮಗಳು ನಡೆಯುತ್ತಿದ್ದು, ಮುಂದೆಯೂ ಈ ಜಾತ್ರೆ ಇದೇ ರೀತಿ ಚೆನ್ನಾಗಿ ಮೂಡಿ ಬರಲಿ ಎಂದು ಆಶೀಸುತ್ತೇನೆ.

– **ಶ್ರೀಮತಿ ದೊಡ್ಡವ್ವ,** ಬಾಗೇವಾಡಿ

### ಲಾಭ ಮತ್ತು ಖುಷಿ ತಂದ ಜಾತ್ರೆ

ನಾನು ಮೈಸೂರಿನಿಂದ ಬಂದು ಕಳೆದ 5 ವರ್ಷದಿಂದ ಸುತ್ತೂರು ಜಾತ್ರೆಯಲ್ಲಿ ಗೋಬಿ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದೇನೆ. ನನಗೆ ದಿನಕ್ಕೆ 1 ರಿಂದ 2 ಸಾವಿರ ಲಾಭ ಬರುತ್ತಿದೆ. ಇದು ನಮಗೆ ಹೆಚ್ಚಿನ ಖುಷಿ ಕೊಡುತ್ತದೆ. ವಿಶೇಷವಾಗಿ ನಮಗೆ ಇಲ್ಲಿನ ವಸತಿ ಮತ್ತು ಊಟದ ವ್ಯವಸ್ಥೆ ಬಹಳ ಅನುಕೂಲಕರವಾಗಿದ್ದು, ಲಾಭದ ಜೊತೆಗೆ ಜಾತ್ರೆಯನ್ನು ಖುಷಿಯಿಂದ ಅನುಭವಿಸುತ್ತಿದ್ದೇನೆ.

– **ಸುಜಾತಾ ರಾಜೇಂದ್ರ,** ಮೈಸೂರು.

### ಜಾತಿ–ಮತ ಬೇಧವಿಲ್ಲದ ಜಾತ್ರೆ



ನಾನು ಸುಮಾರು 8 ವರ್ಷಗಳಿಂದ ಜಾತ್ರೆಗೆ ಬರುತ್ತಿದ್ದು, ಪ್ರತಿ ವರ್ಷವೂ ಜನಜಂಗುಳಿ ಹೆಚ್ಚುತ್ತಿದೆ. ಶ್ರೀಗಳು ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಿದ್ದು, ಅವರ ಕೀರ್ತಿ ಅಪಾರ, ಸುತ್ತೂರು ಜಾತ್ರೆಯು ಬಹಳ ಆಕರ್ಷಣೀಯವಾಗಿದೆ. ಯಾವುದೇ ಜಾತಿ–ಮತಗಳ ಭೇದವಿಲ್ಲದೆ ಜನರು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಿರುವುದು ಅಚ್ಚರಿ ಮೂಡಿಸಿದೆ.

**– ಶ್ರೀಮತಿ ಶೀಲಾ ರಾಜಶೇಖರ್, ಅನಿವಾಸಿ ಭಾರತೀಯರು**

### ನೆಮ್ಮದಿಯ ತಾಣ ಶ್ರೀಕ್ಷೇತ್ರ



ಸುತ್ತೂರು ಶ್ರೀಕ್ಷೇತ್ರ ಮನಸ್ಸಿಗೆ ಒಂದು ನೆಮ್ಮದಿಯ ತಾಣವೆಂದೇ ಹೇಳಬಹುದು, ಜೆಎಸ್ಎಸ್ ಸಂಸ್ಥೆಯು ಜಗತ್ತಿನಾದ್ಯಂತ ವಿಸ್ತರಿಸುತ್ತಿದ್ದು, ವಿದ್ಯಾರ್ಥಿಗಳಿಗೆ ಉನ್ನತ ರೀತಿಯಲ್ಲಿ ಶಿಕ್ಷಣವನ್ನು ನೀಡುತ್ತಿದ್ದಾರೆ. ಬಡ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ವಸತಿ ವ್ಯವಸ್ಥೆಯನ್ನು ಮಾಡಿರುವುದು ನನಗೆ ಬಹಳ ಸಂತೋಷವನ್ನುಂಟು ಮಾಡಿದೆ. – **ಲಿಂಗಪ್ಪ, ಬೆಂಗಳೂರು** –ಎಂ.ಚೈತ್ರ, ಎಂ. ಹರ್ಷಿತ

# ಸಾಂಸ್ಕೃತಿಕ ಕಾರ್ಯಕ್ರಮಗಳ ಫಲಿತಾಂಶ



**ಸಮೂಹ ನೃತ್ಯ ಸ್ಪರ್ಧೆ**ಯಲ್ಲಿ ಮೈಸೂರಿನ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಕುಣಿದು ಕುಪ್ಪಳಿಸಿ ಮೊದಲನೇ ಬಹುಮಾನವನ್ನು ಪಡೆದರೆ, ಎರಡನೇ ಬಹುಮಾನವನ್ನು ಕೊಳ್ಳೇಗಾಲದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪಡೆದರು. ಮೂರನೇ ಬಹುವಾನವನ್ನು ಮೈಸೂರಿನ ಊಟಿ ರಸ್ತೆಯ ಪದವಿ ಕಾಲೇಜಿನ ವಿದ್ಯಾರ್ಥಿಗಳು ಬಳುಕುತ್ತಾ ಹಿಡಿದರೆ, ನಾಲ್ಕನೇ ಬಹುಮಾನವನ್ನು ಚಾಮರಾಜನಗರದ ಮಹಿಳಾ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳು ತಾಳ್ಮೆಯಿಂದ ಸ್ವೀಕರಿಸಿದರು. ಹುಲ್ಲಹಳ್ಳಿಯ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳು ಐದನೇ ಬಹುಮಾನವನ್ನು ಪಡೆದುಕೊಂಡರು.

**ಸಮೂಹ ಗಾಯನ ಸ್ಪರ್ಧೆ**ಯಲ್ಲಿ ಮೈಸೂರಿನ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಕಂಚಿನ ಕಂಠದಿಂದ ಹಾಡುತ್ತ ಪಡೆದರೆ, ಮೈಸೂರಿನ ವಿಶೇಷ ಚೇತನ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಎರಡನೇ ಬಹುಮಾನ ಪಡೆದು ಕೋಗಿಲೆಗಳಂತೆ ಕೂಗಿದರು. ಮೂರನೇ ಬಹುಮಾನವನ್ನು ಕೊಳ್ಳೇಗಾಲದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಸುಶ್ರಾವ್ಯವಾಗಿ ಹಾಡುವ ಮೂಲಕ ಪಡೆದರೆ, ನಾಲ್ಕನೇ ಬಹುಮಾನವನ್ನು ಚಾಮರಾಜನಗರದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪಡೆಯುವಲ್ಲಿ ಯಶಸ್ವಿಯಾದರು, ಐದನೇ ಬಹುಮಾನವನ್ನು ಕೊಳ್ಳೇಗಾಲದ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳು ಎತ್ತಿ ಹಿಡಿದರು.

**ಸಮೂಹ ಶಾಸ್ತ್ರೀಯ ನೃತ್ಯ ಸ್ಪರ್ಧೆ**ಯಲ್ಲಿ ಮೈಸೂರಿನ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಪಡೆದು ನಲಿದರೆ, ಎರಡನೇ ಬಹುಮಾನವನ್ನು ಕೊಳ್ಳೇಗಾಲದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪಡೆದು ಕುಣಿದರು. ಬೆಂಗಳೂರಿನ ಜಯನಗರದ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳು 3ನೇ ಬಹುಮಾನವನ್ನು ಶಾಸ್ತ್ರೀಯವಾದ ಭಂಗಿಯಲ್ಲಿ ಪಡೆದರೆ, ನಾಲ್ಕನೇ ಬಹುಮಾನವನ್ನು ಚಾಮರಾಜನಗರದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪಡೆದು ತೃಪ್ತಿಪಟ್ಟರು.

**ಶಾಸ್ತ್ರೀಯ ನೃತ್ಯ ಸ್ಪರ್ಧೆ**ಯಲ್ಲಿ ಮೈಸೂರಿನ ಎಸ್.ಜೆ.ಸಿ.ಇ. ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳು ಶಾಸ್ತ್ರೀಯ ನೃತ್ಯ ಮಾಡುವ ಮೂಲಕ ಪ್ರಥಮ ಬಹುಮಾನ ಹಿಡಿದರೆ, 2ನೇ ಬಹುಮಾನವನ್ನು ಚಾಮರಾಜನಗರ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳು ಪಡೆಯುವಲ್ಲಿ ಖುಷಿಪಟ್ಟರು. ನಂಜನಗೂಡಿನ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳು ಮೂರನೇ ಬಹುಮಾನದಲ್ಲಿ ನಿಂತರೆ. ನಾಲ್ಕನೇ ಬಹುವಾನವನ್ನು ಕೊಳ್ಳೇಗಾಲದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಗಳಿಸಿಕೊಂಡರು. ಐದನೇ ಬಹುಮಾನಕ್ಕೆ ಭಾಜನರಾದವರು ಚಾಮರಾಜನಗರದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು.

**ಶಾಸ್ತ್ರೀಯ ಸಂಗೀತ ಸ್ಪರ್ಧೆ**ಯಲ್ಲಿ ಮೈಸೂರಿನ ಎಸ್.ಜೆ.ಸಿ.ಇ. ಅಂಗವಿಕಲ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಸುಶ್ರಾವ್ಯವಾಗಿ ಹಾಡಿ ಪಡೆಯುವಲ್ಲಿ ಯಶಸ್ವಿಯಾದರೆ, ಮೈಸೂರಿನ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು 2ನೇ ಬಹುಮಾನದಲ್ಲಿ ಕುಳಿತರು.

**ವಚನಾಧಾರಿತ ನೃತ್ಯ ಸ್ಪರ್ಧೆ**ಯಲ್ಲಿ ಮೈಸೂರಿನ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಭಕ್ತಿ ಭಾವದಿಂದ ನೃತ್ಯ ಮಾಡುವ ಮೂಲಕ ಪ್ರಥಮ ಬಹುಮಾನಕ್ಕೆ ಭಾಜನರಾದರೆ, 2ನೇ ಬಹುಮಾನವನ್ನು ಚಾಮರಾಜನಗರದ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳು ಪಡೆಯುವಲ್ಲಿ ಯಶಸ್ವಿಯಾದರು. ಚಾಮರಾಜನಗರದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಮೂರನೇ ಬಹುಮಾನದಲ್ಲಿ ನಿಂತರು. ನಾಲ್ಕನೇ ಬಹುಮಾನವನ್ನು ಕೊಳ್ಳೇಗಾಲದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪಡೆದರೆ, ಐದನೇ ಬಹುಮಾನವನ್ನು ಜಯನಗರ ಪಿ.ಯು. ಕಾಲೇಜಿನ ವಿದ್ಯಾರ್ಥಿಗಳು ಪಡೆದು ತೃಪ್ತಿಪಟ್ಟರು.

ಹೆಚ್ಚುವರಿಯಾಗಿ 8 ಅಂಕಗಳನ್ನು ಗಳಿಸಿದ ಮೈಸೂರಿನ ನರ್ಸಿಂಗ್ ಕಾಲೇಜಿಗೆ ಪರ್ಯಾಯ ಪಾರಿತೋಷಕದ ಹಿರಿಮೆಯ ಗರಿ ಮುಡಿಗೇರಿತು.



ಶನಿವಾರ ಅಪರಾಹ್ನ ಕಲಬುರ್ಗಿಯ ಪಂಡಿತ್ ಶ್ರೀ ಪಂಚಾಕ್ಷರಿ ಗವಾಯಿಗಳ ಅಂಧರ ಸಂಗೀತ ಕಲಾ ಬಳಗದ ಕಲಾವಿದರಿಂದ ಜಾತ್ರಾ ಮಹೋತ್ಸವದ ಪ್ರಧಾನ ವೇದಿಕೆಯಲ್ಲಿ ಹರಿದುಬಂದ ಸುಗಮ ಸಂಗೀತ



ಸುತ್ತೂರು ಶ್ರೀಕ್ಷೇತ್ರದಲ್ಲಿ ಶನಿವಾರ ಮುಂಜಾನೆ ನಡೆದ ಪಥಸಂಚಲನದಲ್ಲಿ ರಘುಲೀಲಾ ಸಂಗೀತ ಮಂದಿರದ ಕಲಾವಿದರು ವಚನಗಳು ಮತ್ತು ಭಕ್ತಿಗೀತೆಗಳನ್ನು ಹಾಡಿದರು.

# ಭಾರತೀಯ ಪರಂಪರೆಯಲ್ಲಿ ಮದುವೆಗೆ ಪವಿತ್ರ ಸ್ಥಾನವಿದೆ



ಜೀವನದಲ್ಲಿ ಕಷ್ಟ–ಸುಖ–ಪ್ರೀತಿಯನ್ನು ಸಮವಾಗಿ ಹಂಚಿಕೊಂಡು ಯಶಸ್ವಿ ವೈವಾಹಿಕ ಜೀವನವನ್ನು ನಡೆಸುವ ಮೂಲಕ ನೀವು ಇತರರಿಗೆ ಮಾದರಿಯಾಗ ಬೇಕು. ಮುಂದೆ ನಿಮ್ಮ ಮಕ್ಕಳನ್ನು ಸಮಾಜದಲ್ಲಿ ಒಳ್ಳೆ ಪ್ರಜೆಗಳನ್ನಾಗಿ ರೂಪಿಸಬೇಕು ಎಂದು ಉಜ್ಜಯಿನಿಯ ಶ್ರೀಪೀಠದ ಜಗದ್ಗುರು **ಶ್ರೀ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳವರು** ನುಡಿದರು. ಜಾತ್ರಾ ಮಹೋತ್ಸವದ ಸಾಮೂಹಿಕ ವಿವಾಹದಲ್ಲಿ ಸಮ್ಮುಖ ವಹಿಸಿ ಆಶೀರ್ವಚನ ನೀಡಿದ ಅವರು ಸುತ್ತೂರು ಶ್ರೀಕ್ಷೇತ್ರ ಪ್ರತಿ ವರ್ಷವೂ ಕೂಡ ಅತ್ಯಂತ ಅದ್ಭುತವಾಗಿ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದೆ. ಸುತ್ತೂರು 'ಮಠದ್ ಜಾತ್ರಾದಿ ನೆಲೆಯಹ' ಎನ್ನುವುದಕ್ಕೆ ಸೂಕ್ತವಾಗಿದೆ. ಮದುವೆಗೆ ಭಾರತೀಯ ಸನಾತನ ಪರಂಪರೆಯಲ್ಲಿ ಪವಿತ್ರವಾದ ಸ್ಥಾನವಿದೆ. ಪವಿತ್ರವಾದ ಸಂಸ್ಕಾರ ಅಂದರೆ ವಿವಾಹ ಸಂಸ್ಕಾರ. ಸುತ್ತೂರು ಶ್ರೀಗಳವರು ಸಾಮೂಹಿಕ ವಿವಾಹವನ್ನು ಏರ್ಪಡಿಸುವ ಮೂಲಕ ಜನರು ವಿವಾಹ ಮಾಡಿಕೊಳ್ಳಲು ಮಾಡುವ ಖರ್ಚನ್ನು ಉಳಿಸಿದಂತಾಗಿದೆ. ಇಲ್ಲಿ ವಿವಾಹವಾಗಿರುವ ಎಲ್ಲರಿಗೂ ಖರ್ಚಾಗಬಹುದಾಗಿದ್ದ ಸುಮಾರು 4 ಕೋಟಿ ರೂ.ಗಳಷ್ಟು ಹಣವನ್ನು ರಾಷ್ಟ್ರೀಯ ಸಂಪತ್ತಿಗೆ ಉಳಿತಾಯ ಮಾಡಿದ ಕೀರ್ತಿ ಪೂಜ್ಯ ಶ್ರೀಗಳವರಿಗೆ ಸಲ್ಲುತ್ತದೆ. ವಧು–ವರರಿಗೆ ಗಣ್ಯರ ಮುಂದೆ ಮದುವೆಯಾಗುವ ಅವಕಾಶವನ್ನು ಕಲ್ಪಿಸಿಕೊಟ್ಟು ಸುತ್ತೂರು ಶ್ರೀಗಳು ದೊಡ್ಡ ಕ್ರಾಂತಿಯನ್ನೇ ಮಾಡಿದ್ದಾರೆ. ನಾನು ಸಾವಿರಾರು ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಹೋಗಿದ್ದೇನೆ, ಸಾಮಾನ್ಯವಾಗಿ ಎಲ್ಲಾ ಕಡೆ ವಧು–ವರರನ್ನು ವೇದಿಕೆ ಮುಂಭಾಗದಲ್ಲಿ ಕೂರಿಸುತ್ತಾರೆ. ಇಲ್ಲಿ ಶ್ರೀಗಳು ಭಕ್ತರು ನನಗಿಂತ ಶ್ರೇಷ್ಠರು ಎಂದು ತಿಳಿದು ಗಣ್ಯರ ಜೊತೆಗೆ ಸಮಾನವಾಗಿ ವೇದಿಕೆ ಮೇಲೆ ಕೂರಿಸಿರುವುದನ್ನು ಮೊದಲ ಬಾರಿಗೆ ಇಲ್ಲಿಯೇ ಕಂಡದ್ದು ಎಂದು ನುಡಿದರು. – ಬಿ. ಮಾನಸ




## 3 ಫೆಬ್ರವರಿ 2019 ಭಾನುವಾರ * ಬೆಳಗ್ಗೆ 10.55 – ರಥೋತ್ಸವ

**ಬೆಳಗ್ಗೆ 11.00 – ಧಾರ್ಮಿಕ ಸಭೆ: ಸಮ್ಮುಖ :** ನಿ.ಪ್ರ.ಸ್ವ. **ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು,** ಶ್ರೀ ಸಿದ್ಧಗಂಗಾ ಮಠ, ತುಮಕೂರು, **ಡಾ. ಶ್ರೀ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳು,** ಶ್ರೀ ಲಕ್ಷ್ಮೀಸೇನ ದಿಗಂಬರ ಜೈನ ಮಠ, ಕೊಲ್ಹಾಪುರ

**ಅಧ್ಯಕ್ಷತೆ : ಶ್ರೀ ಅನಂತಕುಮಾರ್ ದತ್ತಾತ್ರೇಯ ಹೆಗ್ಡೆ,** ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವರು

**ಉದ್ಘಾಟನೆ : ಶ್ರೀ ಹೆಚ್.ಡಿ. ದೇವೇಗೌಡ,** ಲೋಕಸಭಾ ಸದಸ್ಯರು ಹಾಗೂ ಮಾಜಿ ಪ್ರಧಾನಿಗಳು

**ಶ್ರೀ ಶಿವರಾತ್ರೀಶ್ವರ ಪಂಚಾಂಗ ಬಿಡುಗಡೆ : ಡಾ. ಶಾಮನೂರು ಶಿವಶಂಕರಪ್ಪ,** ಶಾಸಕರು, ಮಾಜಿ ಸಚಿವರು ಹಾಗೂ ಅಧ್ಯಕ್ಷರು, ಅ.ಭಾ.ವೀ. ಮಹಾಸಭಾ

**ಮುಖ್ಯ ಅತಿಥಿಗಳು : ಶ್ರೀ ಕೆ.ಸಿ. ಕೊಂಡಯ್ಯ,** ವಿಧಾನಪರಿಷತ್ ಸದಸ್ಯರು, ಬಳ್ಳಾರಿ, **ಶ್ರೀ ಅರವಿಂದ** ಸಿ. **ಬೆಲ್ಲದ,** ವಿಧಾನಸಭಾ ಸದಸ್ಯರು, ಧಾರವಾಡ, **ಶ್ರೀ ಆಯನೂರು ಮಂಜುನಾಥ್,** ವಿಧಾನಪರಿಷತ್ ಸದಸ್ಯರು, ಶಿವಮೊಗ್ಗ, **ಶ್ರೀ ಎಲ್.ಆರ್. ಶಿವರಾಮೇಗೌಡ,** ಲೋಕಸಭಾ ಸದಸ್ಯರು, ಮಂಡ್ಯ, **ಶ್ರೀ ಎಸ್.ಎಸ್. ಗಣೇಶ್,** ಉದ್ಯಮಿಗಳು, ದಾವಣಗೆರೆ, ಶ್ರೀಮತಿ ರೇಖಾ ಗಣೇಶ್, ದಾವಣಗೆರೆ,

**ಉಪನ್ಯಾಸ : ಶ್ರೀ ಮಲ್ಲಯ್ಯ ಸ್ವಾಮಿಗಳು,** ಶ್ರೀ ಶಿವಾನಂದ ಮಠ, ಘೋಡಗೇರಿ, ಬೆಳಗಾವಿ ಜಿಲ್ಲೆ, **ರೆ. ಲೆಸ್ಲಿ ಮೊರಾಸ್,** ಕ್ಯಾಥೋಲಿಕ್ ಧರ್ಮಪ್ರಾಂತ್ಯ, ಮೈಸೂರು, **ಶ್ರೀ ಎಸ್.ಬಿ. ಮಹಮ್ಮದ್ ದಾರಿಮಿ,** ಕೇಂದ್ರೀಯ ಜುಮಾ ಮಸೀದಿ, ಮುಲ್ಕಿ, ದ.ಕ.ಜಿಲ್ಲೆ

## ಸಂಜೆ 4.00 – ಚಿತ್ರಕಲೆ ಹಾಗೂ ಗಾಳಿಪಟ ಸ್ಪರ್ಧೆ
## ಐವತ್ತೊಂದನೆಯ ದನಗಳ ಜಾತ್ರೆ : ಉದ್ಘಾಟನೆ

**ಸಮ್ಮುಖ :** ನಿ.ಪ್ರ.ಸ್ವ. **ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು,** ಸುಕ್ಷೇತ್ರ ಶ್ರೀ ಕೋಡಿಮಠ ಮಹಾಸಂಸ್ಥಾನ, ಹಾರನಹಳ್ಳಿ, **ಶ್ರೀ ಸ್ವಾಮಿ ಶಿವಸ್ವರೂಪಾನಂದಜಿ,** ಶ್ರೀ ಶಿವಗಿರಿ ಮಠ, ವರ್ಕಲ್, ತಿರುವನಂತಪುರ

**ಅಧ್ಯಕ್ಷತೆ : ಶ್ರೀ ಬಂಡೆಪ್ಪ ಎಂ. ಕಾಶೆಂಪೂರ,** ಸಹಕಾರ ಸಚಿವರು

**ದನಗಳ ಜಾತ್ರೆ ಉದ್ಘಾಟನೆ : ಶ್ರೀ ವೆಂಕಟರಾವ್ ನಾಡಗೌಡ,** ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

**ಗಾಳಿಪಟ ಸ್ಪರ್ಧೆ ಉದ್ಘಾಟನೆ : ಶ್ರೀ ಬಿ.ಜಡ್. ಜಮೀರ್ ಅಹಮದ್ ಖಾನ್,** ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು

**ಚಿತ್ರಕಲಾ ಸ್ಪರ್ಧೆ ಉದ್ಘಾಟನೆ : ಶ್ರೀ ರಾಜಶೇಖರ ಬಸವರಾಜ ಪಾಟೀಲ್,** ಗಣಿ ಮತ್ತು ಭೂವಿಜ್ಞಾನ ಸಚಿವರು

**ಮುಖ್ಯ ಅತಿಥಿಗಳು : ಶ್ರೀ ಸಂಜಯ್ ರಾಮಚಂದ್ರ ಪಾಟೀಲ್,** ಲೋಕಸಭಾ ಸದಸ್ಯರು, ಸಾಂಗ್ಲಿ, **ಶ್ರೀ ಕೆ.ಆರ್. ಅರ್ಜುನನ್** ರಾಜ್ಯಸಭಾ ಸದಸ್ಯರು, ಊಟಿ, **ಶ್ರೀ ಅರವಿಂದ ಲಿಂಬಾವಳಿ,** ಶಾಸಕರು ಹಾಗೂ ಮಾಜಿ ಸಚಿವರು, **ಶ್ರೀ ನರಸಿಂಹ ನಾಯಕ್ (ರಾಜುಗೌಡ),** ಶಾಸಕರು ಹಾಗೂ ಮಾಜಿ ಸಚಿವರು, **ಶ್ರೀ ಆರ್. ಗಣೇಶ್,** ವಿಧಾನಸಭಾ ಸದಸ್ಯರು, ಊಟಿ, **ಶ್ರೀ ಕೆ.ವೈ. ನಂಜೇಗೌಡ,** ಶಾಸಕರು ಹಾಗೂ ಅಧ್ಯಕ್ಷರು, ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಒಕ್ಕೂಟ, **ಶ್ರೀ ಎಂ. ಶಿವಣ್ಣ,** ಮಾಜಿ ಸಚಿವರು, **ಶ್ರೀ ತುಷಾರ್ ವೆಲ್ಲಪಳ್ಳಿ,** ಉಪಾಧ್ಯಕ್ಷರು, ಶ್ರೀ ನಾರಾಯಣ ಧರ್ಮಪರಿಪಾಲನ ಯೋಗಂ, ಕೊಲ್ಲಂ, ಕೇರಳ

## ರಾತ್ರಿ 7.00 – ರಸಪ್ರಶ್ನೆ * ವಿಷಯ : ಶರಣ ದರ್ಶನ

# ಬಸವಾದಿ ಶರಣರ ಹಾದಿಯಲ್ಲಿ ಸುತ್ತೂರು ಶ್ರೀಗಳು



ಶೇಕಡ 70ರಷ್ಟು ಹಳ್ಳಿಗಳಿಂದಲೇ ಕೂಡಿರುವ ನಮ್ಮ ದೇಶಕ್ಕೆ ಹಳ್ಳಿಗಳೇ ಜೀವಾಳ, ಹಳ್ಳಿಗಳ ಉದ್ಧಾರವಾದರೆ ಮಾತ್ರ ದೇಶ ಅಭಿವೃದ್ಧಿಯಾಗುತ್ತದೆ ಎಂದು ಗೃಹ ಸಚಿವರಾದ **ಶ್ರೀ ಎಂ.ಬಿ. ಪಾಟೀಲ್**ರವರು ಹೇಳಿದರು. ರಾಜ್ಯಮಟ್ಟದ ಭಜನಾಮೇಳ ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ದೇಶದಲ್ಲಿ ಜಾತ್ರೆ, ಹಬ್ಬಗಳು ಸಂಸ್ಕೃತಿಯ ಪ್ರತೀಕವಾಗಿದ್ದು ಹಳ್ಳಿ, ಪಟ್ಟಣ ಹಾಗೂ ನಗರಗಳೆನ್ನದೆ ಎಲ್ಲಾ ಕಡೆ ನಡೆಯುತ್ತವೆ. ಜನರಲ್ಲಿ ಜಾತಿ–ಮತ, ಮೇಲು–ಕೀಳು ಎಂಬ ಭೇದ ಭಾವವಿಲ್ಲದೇ ಎಲ್ಲರೂ ಒಂದಾಗಿ ಬದುಕಬೇಕೆಂಬ ಉದ್ದೇಶದಿಂದ ಇಂತಹ ಜಾತ್ರೆಗಳನ್ನು ನಡೆಸಲಾಗುತ್ತದೆ. ಸುತ್ತೂರು ಶ್ರೀಮಠವು ಅನ್ನ ಮತ್ತು ಅಕ್ಷರ ದಾಸೋಹಕ್ಕೆ ಮಾತ್ರ ಸೀಮಿತವಾಗದೆ ಆರೋಗ್ಯ ಸೇವೆಯನ್ನು ಮಾಡುವ ಮೂಲಕ ಬಡವರಿಗೆ ನೆರವಾಗುತ್ತಿದೆ. ಬಸವಣ್ಣನವರ ಆಶಯದಂತೆ ಶ್ರೀಮಠವು ಕಾರ್ಯ ನಿರ್ವಹಿಸುವ ಮೂಲಕ ಹನ್ನೆರಡನೆಯ ಶತಮಾನದ ಬಸವಾದಿ ಶರಣರ ಕಾಯಕ ದಾಸೋಹ ತತ್ವವನ್ನು ಜಗತ್ತಿಗೆ ಸಾರುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. –ಸಿ.ಕೆ. ಸುನಿತ



ಶ್ರೀ ಮಠದ ಮುಂಭಾಗದಿಂದ ಶ್ರೀ ಸೋಮೇಶ್ವರ ಉತ್ಸವ ಹೊರಟಿರುವ ದೃಶ್ಯ

# ಜನ ಕಲ್ಯಾಣ ಕಾರ್ಯ

ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಶಾಸಕರು, ಮಾಜಿ ಸಚಿವರು ಹಾಗೂ ಅ.ಭಾ.ವೀರಶೈವ ಮಹಾಸಭಾದ ಅಧ್ಯಕ್ಷರಾದ **ಡಾ. ಶಾಮನೂರು ಶಿವಶಂಕರಪ್ಪನವರು** ಸುತ್ತೂರು ಶ್ರೀಕ್ಷೇತ್ರವು ಮೈಸೂರು ಜಿಲ್ಲೆಯಲ್ಲಷ್ಟೆ ಅಲ್ಲದೇ ವಿಶ್ವದಾದ್ಯಂತ ಸಾಮಾಜಿಕ ಕೊಡುಗೆಯನ್ನು ನೀಡುತ್ತಿದ್ದು, ಇತರೆ ಮಠಗಳಿಗೆ ಮಾದರಿಯಾಗಿದ್ದು ಸಮಾಜಕ್ಕೆ ದಾರಿದೀಪವಾಗಿದೆ ಅಲ್ಲದೇ ಶ್ರೀಕ್ಷೇತ್ರವು ಅಸಂಖ್ಯಾತ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ಇದಕ್ಕೆ ಸಾಮೂಹಿಕ ವಿವಾಹ ಸಮಾರಂಭವೇ ಪ್ರತ್ಯಕ್ಷ ಸಾಕ್ಷಿಯಾಗಿದೆ. 184 ಜೊತೆ ನವವಿವಾಹಿತರ ಬಾಳಿಗೆ ಆಶಾಕಿರಣವಾಗಿರುವ ಶ್ರೀಗಳು ನಮ್ಮೆಲ್ಲರ ಆರಾಧ್ಯದೈವವಾಗಿದ್ದಾರೆ ಎಂದು ನುಡಿದರು. –ಸ್ವಾತಿ ಯು




ನವ ಜೋಡಿಗಳಿಗೆ ಪ್ರಮಾಣಪತ್ರ ವಿತರಣೆ

# ಸೇವಾ ಕೈಂಕರ್ಯ ಅಪಾರ

ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಉನ್ನತ ಶಿಕ್ಷಣ ಸಚಿವರಾದ **ಶ್ರೀ ಜಿ.ಟಿ. ದೇವೇಗೌಡರವರು** ವಸ್ತುಪ್ರದರ್ಶನ, ಸಾಮೂಹಿಕ ವಿವಾಹ, ರಥೋತ್ಸವ, ಕೃಷಿ ಮೇಳ, ಕೊಂಡೋತ್ಸವ, ದನಗಳ ಜಾತ್ರೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಬಹಳ ವರ್ಷಗಳಿಂದ ಪರಮಪೂಜ್ಯರ ನೇತೃತ್ವದಲ್ಲಿ ಜರುಗುತ್ತಿದ್ದು, ಇಡೀ ದೇಶದಲ್ಲೇ ನಾನು ಕಂಡರಿಯದ ವಿಶೇಷ ಜಾತ್ರೆ ಇದಾಗಿದೆ. ಅಲ್ಲದೆ ಜೋಳಿಗೆ ಇಡಿಯುವ ಮೂಲಕ ಸಮಾಜದ ಬಡ ಮಕ್ಕಳಿಗೆ ಅಕ್ಷರ, ಅನ್ನ, ಆರೋಗ್ಯ ನೀಡುವ ಮೂಲಕ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದ್ದು, ಸಂಸ್ಥೆಯು ರಾಜ್ಯ, ರಾಷ್ಟ್ರವಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿದೆ. ಶ್ರೀಗಳು ಕೃಷಿ ಸಂಶೋಧನಾ ಕೇಂದ್ರವನ್ನು ತೆರೆಯುವುದರ ಮೂಲಕ ರೈತರ ಬಾಳಿಗೆ ದಾರಿದೀಪವಾಗಿದ್ದಾರೆ. ಅಲ್ಲದೆ ಸಂಸ್ಕೃತಿ, ಸಾಹಿತ್ಯ, ಜಾನಪದ ಕಲೆ, ಸಂಗೀತ, ದೇಶೀಯ ಆಟಗಳನ್ನು ಪ್ರೋತ್ಸಾಹಿಸುವ ದಿಕ್ಕಿನಲ್ಲಿ ಹತ್ತುಹಲವು ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಅಪಾರ ಸೇವಾಕೈಂಕರ್ಯದಲ್ಲಿ ತೊಡಗಿರುವುದು ನಮ್ಮೆಲ್ಲರ ಭಾಗ್ಯವಾಗಿದೆ ಎಂದು ತಿಳಿಸಿದರು. –ಪ್ರಿಯದರ್ಶಿನಿ ವಿ.

## ಬಲು ಅಪರೂಪ ನಮ್ ಜೋಡಿ... ಸೆಲ್ಫಿ ತೆಗೆಯಲು ನಾವ್ ರೆಡಿ...



ಸಾಮೂಹಿಕ ವಿವಾಹದ ನವಜೋಡಿಯತ್ತ ನಮ್ಮ ಫೋಕಸ್



ಸಂಕಲ್ಪ ಸಿದ್ಧಿಗಾಗಿ ಕರ್ತೃಗದ್ದುಗೆಯಲ್ಲಿ ಜಗದ್ಗುರುಗಳವರಿಂದ ಪ್ರಾರ್ಥನೆ

# ಅಖಂಡ ಜ್ಯೋತಿ ಅಗರಬತ್ತಿ

ಸೈಕಲ್ ಪ್ಯೂರ್ ಅಗರಬತ್ತಿಯವರು ಪ್ರತಿ ವರ್ಷದಂತೆ ಈ ವರ್ಷವು ಸಹ ಅಖಂಡ ಜ್ಯೋತಿ ಅಗರಬತ್ತಿಯನ್ನು ಸುತ್ತೂರು ಜಾತ್ರಾ ಮಹೋತ್ಸವಕ್ಕೆ ಸಮರ್ಪಿಸಿದರು. ಈ ಅಗರಬತ್ತಿಯು 6 ಅಡಿಗಳ ಎತ್ತರವಿದ್ದು, ಇದರ ತೂಕ 4.5 ಕೆ.ಜಿಯಾಗಿದೆ. ಈ ಅಖಂಡ ಜ್ಯೋತಿ ಅಗರಬತ್ತಿಯನ್ನು ತಯಾರಿಸಲು 3 ತಿಂಗಳಗಳ ಕಾಲ ಸಮಯಬೇಕಾಗುತ್ತದೆ. ಈ ಅಗರಬತ್ತಿಯ ಸುಮಾರು 20 ಗಂಟೆಗಳ ಕಾಲ ಉರಿಯುತ್ತದೆ. ಇದು 3 ವಿವಿಧ ಸುಗಂಧಭರಿತ ಸುವಾಸನೆಯಿಂದ ಕೂಡಿದೆ. ಪರಮ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮತ್ತು ಇನ್ನಿತರೆ ಮಠಗಳ ಶ್ರೀಗಳವರು ಅಗರಬತ್ತಿಯನ್ನು ಹಚ್ಚುವ ಮೂಲಕ ಉದ್ಘಾಟಿಸಿದರು. –ವಿನೋದ್.ಸಿ.& ಹೆಚ್.ಆರ್.ಆದರ್ಶ್

# ಸುತ್ತೂರು ಜಾತ್ರೆ ನಮ್ಮ ಸಂಸ್ಕೃತಿಯ ಪ್ರತಿಬಿಂಬ

### ಶ್ರೀ ಯು.ಟಿ. ಖಾದರ್

ನಮ್ಮ ಸಂಸ್ಕೃತಿ ಮತ್ತು ಆಚಾರ ವಿಚಾರಗಳನ್ನು ಪ್ರತಿಬಿಂಬಿಸುವ ಇಂಥಹ ಜಾತ್ರೆಗಳು ನಮಗೆ ಒಳ್ಳೆಯ ನಡೆನುಡಿ ಕಲಿಸಲು ಸಹಕಾರಿಯಾಗಿವೆ. ಈ ಜಾತ್ರೆಯಲ್ಲಿನ ಎಲ್ಲಾ ಕಾರ್ಯಕ್ರಮಗಳು ಯುವ ಸಮುದಾಯಕ್ಕೆ ಹೆಚ್ಚು ತಿಳುವಳಿಕೆಯನ್ನು ನೀಡುತ್ತವೆ ಎಂದು ನಗರಾಭಿವೃದ್ಧಿ ಸಚಿವರಾದ ಶ್ರೀ ಯು.ಟಿ. ಖಾದರ್ ಅವರು ಅಭಿಪ್ರಾಯಪಟ್ಟರು. ರಾಜ್ಯ ಮಟ್ಟದ ಭಜನಾಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುವ ಜಾತ್ರಾ ಮಹೋತ್ಸವಕ್ಕೆ ಪ್ರತಿ ವರ್ಷವೂ ಬಂದು, ಪೂಜ್ಯ ಶ್ರೀಗಳವರ ಆಶೀರ್ವಾದ ಪಡೆಯುವ ಅವಕಾಶವನ್ನು ದೇವರು ನಮಗೆ ಕಲ್ಪಿಸಿದ್ದಾನೆ. ಇಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳು ಮತ್ತಷ್ಟು ಯಶಸ್ವಿಯಾಗಲಿ ಎಂದು ದೇವರಲ್ಲಿ ಕೇಳಿಕೊಳ್ಳುತ್ತೇನೆ ಎಂದು ನುಡಿದರು. – ಸೋಮೇಶ್ ಎಸ್.

1ನೇ ಪುಟದಿಂದ

# ನವನವೀನವಾಗಿರಲಿ ದಾಂಪತ್ಯ

ಸ್ವೀಕರಿಸಿ ನೆರವೇರಿಸುತ್ತಾರೆ. ನಾಡಿನ ಸಮಾಜದ ಏಳಿಗೆಗೆ ಉತ್ತಮ ಕೊಡುಗೆಯನ್ನು ನೀಡುತ್ತಿದ್ದಾರೆ. ಹಲವಾರು ರೀತಿಯ ಪಾರಂಪರಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಗ್ರಾಮೀಣ ಸೊಗಡನ್ನು ಕಂಗೊಳಿಸುವಂತೆ ಮಾಡಿದ್ದಾರೆ. ವಿದ್ಯಾಭ್ಯಾಸ, ಆರೋಗ್ಯ, ಕೃಷಿಯೇತರ, ಎಲ್ಲಾ ಕ್ಷೇತ್ರಗಳಲ್ಲಿ ಏಳಿಗೆ ಹೊಂದಲು ಅವಿರತವಾಗಿ ಶ್ರಮಿಸುತ್ತಿದ್ದು, ಕೃಷಿಕರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಶ್ರೀಗಳ ಶ್ರಮ ಅಪಾರ, ಸುತ್ತೂರು ಮಠವು ಈ ಎಲ್ಲಾ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿರುವುದು ಒಂದು ದಾಖಲೆಯನ್ನೆ ನಿರ್ಮಾಣ ಮಾಡಿದೆ. ಶ್ರೀಮಠವು ಜನರ ಅಭಿವೃದ್ಧಿ ಹಾಗೂ ಅವರ ಏಳಿಗೆಗೆಂದು ಜರುಗಿಸುತ್ತಿರುವ ಎಲ್ಲಾ ಕಾರ್ಯಕ್ರಮಗಳು ಮುಖ್ಯ ಪಾತ್ರ ವಹಿಸುತ್ತಿವೆ. ಶ್ರೀಮಠದ ಈ ಸೇವೆಗೆ ನಾನೆಂದು ಚಿರಋಣಿಯಾಗಿರುತ್ತೇನೆ ಎಂದು ನುಡಿದರು. –ಸುಮ ಪಿ

2ನೇ ಪುಟದಿಂದ

# ಅರಿತು ಬಾಳಿದರೆ ಜೀವನ ಸುಧೆ...



ಡಾ. ಸುಧಾಮೂರ್ತಿಯವರ ಸೇವಾ ಬಾಹುಳ್ಯವಿದು

ಮದುವೆಗಾಗಿ ಹಣವನ್ನು ಕೂಡಿಡುತ್ತಾರೆ. ಅದ್ದೂರಿ ಮದುವೆ ಮಾಡಿ ಸಾಲಗಾರರಾಗುತ್ತಾರೆ ಎಂದು ಹೇಳಿದರು. ಭಾರತೀಯ ಸಮಾಜದಲ್ಲಿ ಮದುವೆಯಾಗಲು ವಧು ವರರು ರೂಪವನ್ನು ನೋಡಿದರೆ, ವಧುವಿನ ತಂದೆ–ತಾಯಿ ಅಳಿಯನ ಹಣ, ಆಸ್ತಿಯನ್ನು ನೋಡುತ್ತಾರೆ, ಅದ್ದೂರಿ ಮದುವೆಗಳಲ್ಲಿ ಪಾಲ್ಗೊಳ್ಳುವ ನಾವುಗಳು ಊಟದ ಬಗ್ಗೆ ಚರ್ಚಿಸುತ್ತೇವೆ. ಮದುವೆಯಾಗಲು ರೂಪ, ಹಣ, ಅಧಿಕಾರ ಮುಖ್ಯವಲ್ಲ, "ಅರಿತು ಬಾಳುವುದೇ ಜೀವನದ ರಹಸ್ಯ" ಮದುವೆಯಾದ ದಂಪತಿಗಳು ಒಬ್ಬರಿಗೊಬ್ಬರು ಅರ್ಥ ಮಾಡಿಕೊಂಡು ಜೀವನ ಸಾಗಿಸಬೇಕು. 1978ರಲ್ಲಿ ನಾನು ಮತ್ತು ನಾರಾಯಣಮೂರ್ತಿರವರು ಬಾಡಿಗೆಯ ಮನೆಯಲ್ಲಿ ಸರಳವಾಗಿ ವಿವಾಹವಾದೆವು. ಕೇವಲ ಅರ್ಧ ಗಂಟೆಗಳಲ್ಲಿ ನಮ್ಮ ಮದುವೆ ಕಾರ್ಯಗಳು ಮುಕ್ತಾಯವಾದವು. ಬೆರಳೆಣಿಕೆಯಷ್ಟು ಬಂಧುಗಳು ಮಾತ್ರ ನಮ್ಮ ಮದುವೆಗೆ ಹಾಜರಿದ್ದರು ಎಂದು ತಮ್ಮ ಮದುವೆಯನ್ನು ನೆನೆದ ಅವರು ನಿಜವಾದ ಸಂಸಾರಕ್ಕೆ ಹಣ ಆಭರಣಗಳಷ್ಟೆ ಮುಖ್ಯವಲ್ಲ, ಗಂಡ ಹೆಂಡತಿ ಪರಸ್ಪರ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಹೊಂದಾಣಿಕೆಯಿಂದ ಜೀವನ ನಡೆಸಬೇಕು. ಸುತ್ತೂರು ಶ್ರೀಗಳು ಸಾಮೂಹಿಕ ವಿವಾಹವನ್ನು ನಡೆಸುವ ಮೂಲಕ ಉತ್ತಮ ಕೆಲಸ ಮಾಡುತ್ತಿದ್ದಾರೆ. ಬಸವಣ್ಣನವರು ಇದ್ದಿದ್ದರೆ ಇಂತಹ ಕೆಲಸವನ್ನೇ ಮಾಡುತ್ತಿದ್ದರು. ಅವರ ತತ್ವ, ಆದರ್ಶಗಳನ್ನು ಪಾಲಿಸುತ್ತಿರುವ ಶ್ರೀಗಳವರು ಬಸವಣ್ಣನವರ ಹಾದಿಯಲ್ಲೇ ನಡೆಯುತ್ತಿದ್ದಾರೆ ಎಂದು ನುಡಿದರು. –ಅಮೂಲ್ಯ ಬಿ ಎಂ




ಜಾತ್ರಾ ಮಹೋತ್ಸವದ ಸಾಮೂಹಿಕ ವಿವಾಹದಲ್ಲಿ ಪರಮಪೂಜ್ಯರು, ಹರಗುರುಚರಮೂರ್ತಿಗಳು ಹಾಗೂ ಗಣ್ಯರೊಂದಿಗೆ ಹೊಸ ಬಾಳಿಗೆ ಅಡಿಯಿಟ್ಟ 182 ಜೋಡಿ ವಧುವರರು

# ಸಮ ಸಮಾಜ ಸಾಕಾರಗೊಳ್ಳಲಿ: ಶ್ರೀ ಸಿದ್ದರಾಮಯ್ಯ

ಶ್ರೀಕ್ಷೇತ್ರವು ಬಸವ ಯುಗಕ್ಕಿಂತಲೂ ಹಿಂದಿನ ದೀರ್ಘವಾದ ಇತಿಹಾಸವನ್ನೊಂದಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹೇಳಿದರು. ರಾಜ್ಯಮಟ್ಟದ ಭಜನಾ ಮೇಳ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅವರು ಬಸವಾದಿ ಶರಣರು ಜಾತಿ–ವರ್ಗ ರಹಿತ ಸಮ ಸಮಾಜದ ನಿರ್ಮಾಣಕ್ಕಾಗಿ ದುಡಿದರು, ಅಂತೆಯೇ ಶ್ರೀಕ್ಷೇತ್ರವೂ ಸಹ ಶ್ರಮಿಸುತ್ತಿದೆ.

ಇತಿಹಾಸ ಪೂರ್ವದಿಂದಲೂ ತಾರತಮ್ಯ ಪದ್ಧತಿ ರೂಢಿಯಲ್ಲಿದ್ದು, ಸರಿ ಪಥದಲ್ಲಿ ನಡೆಸುವಲ್ಲಿ ಬುದ್ಧ–ಬಸವೇಶ್ವರರು ಸೇರಿದಂತೆ ವಿವಿಧ ಮಹಾಪುರುಷರು ಶ್ರಮಿಸಿದ್ದಾರೆ. ಜಾತಿ ವ್ಯವಸ್ಥೆಯಿಂದಾಗಿ ಬಹುತೇಕರು ಅವಕಾಶ ವಂಚಿತರಾಗಿ ಇನ್ನೂ ಬಡವರಾಗಿಯೇ ಉಳಿದಿದ್ದಾರೆ. ಇಂತಹ ದುರ್ಬಲರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ, ಶಕ್ತಿ ತುಂಬಿ ಮುಖ್ಯವಾಹಿನಿಗೆ ತರುವಲ್ಲಿ ಶ್ರೀಮಠದ ಕೊಡುಗೆ ಅಪಾರವಾದದ್ದಾಗಿದೆ. ಪ್ರತಿಯೊಬ್ಬರಿಗೂ ಕಾಯಕ ನಿಷ್ಠೆ ಇರಬೇಕು, ಕಾಯಕದಲ್ಲಿಯೆ ನೆಮ್ಮದಿ, ಸುಖ–ಸಂತೋಷ ಪಡೆಯಬಹುದಾಗಿದೆ. ಅಂದಿನ 'ಅನುಭವ ಮಂಟಪ' ಒಂದು ಸಂಸತ್ತಿನಂತಿತ್ತು. ಅಲ್ಲಿ ಅಲ್ಲಮ ಪ್ರಭುದೇವರ ಅಧ್ಯಕ್ಷತೆಯಲ್ಲಿ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳ ನಿರ್ಮೂಲನೆಗಾಗಿ ಶಿವ ಶರಣರು ಚರ್ಚೆಯಲ್ಲಿ ತೊಡಗಿಸಿಕೊಂಡಿದ್ದರು.

ಕೃಷಿಗೆ ಸಂಬಂಧಿಸಿದ ಸಂಶೋಧನೆಗಳು ಹಾಗೂ ಆಧುನಿಕ ಕೃಷಿ ಪದ್ಧತಿ ಕುರಿತು ರೈತರಿಗೆ ಅರಿವು ಮೂಡಿಸಲು ಜಾತ್ರೆಯಲ್ಲಿ ಆಯೋಜಿಸಿರುವ ಬೃಹತ್ ಕೃಷಿ ಮೇಳವು ರೈತರ ಬಗೆಗೆ ಶ್ರೀಕ್ಷೇತ್ರಕ್ಕಿರುವ ಕಾಳಜಿಯನ್ನು ತೋರಿಸುತ್ತದೆ. ಧರ್ಮ, ಸಂಸ್ಕೃತಿಗಳ ರಕ್ಷಣೆ ಹಾಗೂ ಪ್ರಚಾರ ಕಾರ್ಯದಲ್ಲಿ ಶ್ರೀಮಠವು ಅಗ್ರಗಣ್ಯವಾಗಿದ್ದು, ಇಂತಹ ಶ್ರೇಷ್ಠ ಮಠವು ನಮ್ಮ ವಿಧಾನಸಭಾ ಕ್ಷೇತ್ರದಲ್ಲಿರುವುದು ನಮ್ಮ ಪೂರ್ವದ ಪುಣ್ಯವಾಗಿದೆ ಎಂದು ನುಡಿದರು.

– ಟಿ.ಬಿ. ಪುಣ್ಯ



ರಾಜ್ಯಮಟ್ಟದ ಭಜನಾ ಮೇಳಕ್ಕೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಶಾಸಕರು ಹಾಗೂ ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಚಾಲನೆ ನೀಡಿದರು. ಚಿತ್ರದಲ್ಲಿ ಶ್ರೀ ಯು.ಟಿ. ಖಾದರ್. ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಸಂಪಾದನ ಸ್ವಾಮಿಗಳು, ಶ್ರೀ ಚನ್ನಬಸವ ಸ್ವಾಮಿಗಳವರು, ಚಿತ್ರನಟ ಶ್ರೀ ದರ್ಶನ್, ಶ್ರೀ ಹೆಚ್.ಸಿ. ಮಹದೇವಪ್ಪ, ಶ್ರೀ ಸಂದೇಶ್ ನಾಗರಾಜು, ಡಾ. ಪುಷ್ಪ ಅಮರನಾಥ್ ಮೊದಲಾದವರಿದ್ದಾರೆ.

## ಹಬ್ಬಾಲಿ ಅವರ ರಸಬಳ್ಳಿ...

ಸುತ್ತೂರು ಶ್ರೀಗಳವರು ಜಾತ್ರೆಯ ಮೂಲಕ ಅಕ್ಷರ ಜ್ಞಾನವಿಲ್ಲದ ಜನಪದ ಹಾಡುಗಳನ್ನು ಹಾಡುವ ಕಲಾವಿದರಿಗೆ ವೇದಿಕೆ ಕಲ್ಪಿಸಿಕೊಟ್ಟು



ಅವರ ಪ್ರತಿಭೆಯನ್ನು ಹೊರಹಾಕಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಚಿಕ್ಕೋಡಿಯ ಶ್ರೀ ಸಂಪಾದನ ಚರಮೂರ್ತಿ ಮಠದ **ಶ್ರೀ ಸಂಪಾದನ ಸ್ವಾಮಿಗಳವರು** ಹೇಳಿದರು. ರಾಜ್ಯಮಟ್ಟದ ಭಜನಾ ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಮ್ಮುಖ ವಹಿಸಿ ಆಶೀರ್ವಚನ ನೀಡಿದ ಅವರು ನಮ್ಮ ಪೂರ್ವಿಕರು ಉಳಿಸಿ ಬೆಳೆಸಿಕೊಂಡು ಬಂದಿರುವ ಜನಪದ ಸಾಹಿತ್ಯ ಹಾಗೂ ಭಜನೆ ಕಲೆ ಉಳಿದು ಬೆಳೆಯಲು ಇಂಥಹ ಕಾರ್ಯಕ್ರಮಗಳು ಸಹಕಾರಿಯಾಗಿವೆ. ಸುತ್ತೂರು ಶ್ರೀಗಳವರು 'ಕಾಯಕವೇ ಕೈಲಾಸ' ಎಂಬ ಬಸವಣ್ಣನವರ ನುಡಿಯಂತೆ ನಡೆಯುತ್ತಿದ್ದಾರೆ ಎಂದು ನುಡಿದರು. –ಪುಣ್ಯ ಟಿ.ಬಿ

## ಸಮಾಜ ಸೇವೆಯಲ್ಲಿ ಸದಾ ಮುಂಚೂಣಿ

ಸುತ್ತೂರು ಶ್ರೀಮಠವು ಧರ್ಮ ಪ್ರಚಾರ ಕಾರ್ಯಕ್ಕೆ ಸೀಮಿತವಾಗದೆ ಅನೇಕ ಜನೋಪಯೋಗಿ ಕಾರ್ಯಗಳನ್ನು ಮಾಡುವ ಮೂಲಕ ವಿಶ್ವ ಪ್ರಸಿದ್ಧಿಯಾಗಿದೆ ಎಂದು ಶಾಸಕರು ಹಾಗೂ ಮಾಜಿ ಸಚಿವರಾದ **ಶ್ರೀ ಈಶ್ವರ ಬಿ ಖಂಡ್ರೆರವರು** ತಿಳಿಸಿದರು. ಸುತ್ತೂರು ಜಾತ್ರೆಯು ಪ್ರತಿ ವರ್ಷವೂ ವಿಜೃಂಭಣೆಯಿಂದ ನಡೆಯುತ್ತಿದೆ ಶ್ರೀಕ್ಷೇತ್ರವು ತನ್ನ ಕಾರ್ಯವೈಖರಿಯಿಂದ ಅಂತಾರಾಷ್ಟ್ರಿಯ ಖ್ಯಾತಿ



ಗಳಿಸಿದೆ. ನಮ್ಮ ನಾಡಿನ ಮಠಗಳು ಯಾವುದೇ ಭೇದ ಭಾವಗಳಿಲ್ಲದೆ ಸಮಾಜಸೇವೆ ಮಾಡುತ್ತಿದೆ. ಅವುಗಳಲ್ಲಿ ಸುತ್ತೂರು ಮಠವು ಮುಂಚೂಣಿಯಲ್ಲಿದೆ "ಮಾತಿನ ಸದ್ದು ಸ್ವಲ್ಪ ದೂರ ಕೇಳಿಸುತ್ತದೆ ಆದರೆ ನಾವು ಮಾಡುವ ಕೆಲಸ ಹೆಚ್ಚು ದೂರ ತಲುಪುತ್ತದೆ ಇದಕ್ಕೆ ಶ್ರೀಮಠದ ಸೇವಾ ಕಾರ್ಯವೇ ಸಾಕ್ಷಿಯಾಗಿದೆ ಎಂದರು. –ಸಿ.ಕೆ ಸುನಿತ

## ಕೈ ಹಿಡಿದವರ ಕಾಲಾದೆ ನಾ...

ಮೈಸೂರ ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಹಳೇಹೆಗ್ಗುಡಿಲು ಗ್ರಾಮದ ಶ್ರೀಮತಿ ಕೆಂಪದೇವಮ್ಮ ಮತ್ತು ಲೇಟ್ ಸರಗೂರಯ್ಯನವರ ಪುತ್ರರಾದ ಚಿ. ರಾ. ಮಹದೇವ ಮೂರ್ತಿಯವರು ಬಾಲ್ಯದಲ್ಲಿಯೇ ಪೋಲಿಯೋದಿಂದಾಗಿ ತಮ್ಮ ಎಡಗಾಲನ್ನು ಕಳೆದುಕೊಂಡವರು.

ಸುತ್ತೂರು ಜಾತ್ರೆಯಲ್ಲಿ ಶನಿವಾರ ಜರುಗಿದ ಸಾಮೂಹಿಕ ವಿವಾಹದಲ್ಲಿ ಅವರ ಕೈಹಿಡಿಯುವ ಮೂಲಕ ಅವರ ಮುಂದಿನ ಬಾಳಹಾದಿಯಲ್ಲಿ ನಾನೇ ಅವರಿಗೆ ಊರುಗೋಲಾಗಿ ನಿಲ್ಲುವೆ ಎಂದ ವಧು ಹೆಚ್.ಡಿ. ಕೋಟೆ ತಾಲ್ಲೂಕಿನ ದೇವಲಾಪುರದ ಶ್ರೀಮತಿ ಮಂಜುಳ ಮತ್ತು ಶ್ರೀ ಮಹದೇವಯ್ಯನವರ ಪುತ್ರಿ ಚಿ.ಸೌ. ಸುಗುಣ.



Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore - 570 015